ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಮಲ್ಲೇಶ್ವರ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ನರೇಂದ್ರಕುಮಾರ್ ಎಸ್.ಎಸ್.**

ಲೇಖಕರು

**ಕೆ.ಎಲ್. ನಟರಾಜ್**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**MALLESWARA:** An Introduction Book on Places in Karnataka that Played a Major Role in the Freedom Struggle, Written by K.L. Nataraj, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಕೆ.ಎಲ್. ನಟರಾಜ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೦


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೪೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಕನ್ನಡ ಸಂಸ್ಕೃತಿ ಇಲಾಖೆಯ ಮೂಲಕ, ಭಾರತ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ನೆನಪಿಗಾಗಿ ಸ್ವಾತಂತ್ರ್ಯ ಚಳವಳಿಯ ವಿವಿಧ ಮಜಲುಗಳ ಕಿರುಪುಸ್ತಕಗಳು ಪ್ರಕಟವಾಗುತ್ತಿರುವುದು ಹೆಮ್ಮೆಯ, ಅಭಿಮಾನದ ಹಾಗೂ ಅತ್ಯಂತ ಪ್ರಸ್ತುತವಾದ ಮಹತ್ವವಾದ ಕಾರ್ಯವಾಗಿದೆ.

ಜನ ಸಮುದಾಯವಾಗಲಿ ರಾಷ್ಟ್ರಗಳಾಗಲಿ ತಾನು ಬೆಳೆಯಲು ಕಾರಣವಾದ ಮೂಲ ತಳಪಾಯವನ್ನು ಮರೆಯುವಂತಿಲ್ಲ. ಮರೆತರೆ ಅದು ಬೌದ್ಧಿಕ ಅಪರಾಧವೂ ಹೌದು. ನಮ್ಮ ಮುಂದಿನ ಪೀಳಿಗೆಗೆ, ಇತಿಹಾಸ ದರ್ಶನವನ್ನು ಅಕ್ಷರಗಳಲ್ಲಿ ಕಟ್ಟಿಕೊಡಬೇಕು. ನಮ್ಮ ಅನೇಕ ಇತಿಹಾಸ ತಜ್ಞರು ಈ ದಿಸೆಯಲ್ಲಿ ಅಕ್ಷರ ದಾಸೋಹಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಈ ಸಂಕ್ಷಿಪ್ತ ಇತಿಹಾಸದ ಪಕ್ಷಿನೋಟವನ್ನು ಕಟ್ಟಿಕೊಡಲು, ನಮ್ಮ ರಾಜ್ಯ ಸರಕಾರದ ಈ ಮಹತ್ವದ ಕೆಲಸದಲ್ಲಿ ಭಾಗಿಯಾಗಿ ನನ್ನ ಅಳಿಲು ಸೇವೆ ಸಲ್ಲಿಸಲು ಅವಕಾಶ ಕೊಟ್ಟ ಕರ್ನಾಟಕ ಸಾಹಿತ್ಯ ಅಕಾಡೆಮಿ ಅವರಿಗೂ, ಡಾ. ಬಿ.ವಿ. ವಸಂತಕುಮಾರ್ ಅವರಿಗೂ, ಶ್ರೀಯುತ ಕರಿಯಪ್ಪ ಎನ್. ಅವರಿಗೂ, ನನಗೆ ಈ ಕಾರ್ಯದಲ್ಲಿ ತೊಡಗಲು ಅವಕಾಶ ಮಾಡಿಕೊಟ್ಟು ನನಗೆ ಸೂಕ್ತ ಮಾರ್ಗದರ್ಶನ ನೀಡಿದ ಸಂಪಾದಕರಾದ ಶ್ರೀಯುತ ನರೇಂದ್ರಕುಮಾರ್ ಎಸ್.ಎಸ್. ಅವರಿಗೂ ನಾನು ಕೃತಜ್ಞನಾಗಿರುತ್ತೇನೆ.

ಸಮಯದ ಮಿತಿಯಲ್ಲಿ ನನಗೆ ಪೂರಕವಾದ ಕೆಲವು ಹೆಚ್ಚಿನ ಮಾಹಿತಿಗಳು ದೊರಕದೆ ಲೇಖನದಲ್ಲಿ ಒಂದಿಷ್ಟು ಮಿತಿ ಇದೆ ಎಂಬ ಅರಿವು ನನಗಿದೆ. ಈ ಕೊರತೆಗಾಗಿ ಕ್ಷಮೆ ಇರಲಿ.

ಈ ಐತಿಹಾಸಿಕ ನೆನಪುಗಳ ಅಕ್ಷರಚಿತ್ತಾರ, ಎಲ್ಲರ ಮನ-ಮನೆಗಳಲ್ಲಿ ತಲುಪಲಿ ಎಂಬ ಆಶಯದೊಡನೆ.

೧೯/೧೨/೨೦೨೧ **– ಕೆ ಎಲ್ ನಟರಾಜ್**

# ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಇಂದಿನ ಮಲ್ಲೇಶ್ವರ | ೧೩ |
| ಮಲ್ಲೇಶ್ವರದ ಸಂಕ್ಷಿಪ್ತ ಚರಿತ್ರೆ | ೧೬ |
| ಬೆಂಗಳೂರು ನಗರ ಹಾಗೂ ಮಲ್ಲೇಶ್ವರದಲ್ಲಿ ಸ್ವಾತಂತ್ರ್ಯದ ಕಿಚ್ಚು | ೧೯ |
| ಮಲ್ಲೇಶ್ವರದ ಸ್ವಾತಂತ್ರ ಹೋರಾಟದ ಕಲಿಗಳು | ೨೪ |
| ಬೆಂಗಳೂರಿನಲ್ಲಿ ಮಹಾತ್ಮ ಗಾಂಧೀಜಿ | ೩೧ |
| ಆಧಾರ ಗ್ರಂಥಗಳು | ೩೫ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೩೬ |

# ಇಂದಿನ ಮಲ್ಲೇಶ್ವರ

**೧೮೯೮ರಲ್ಲಿ** ಮೈಸೂರು ರಾಜ್ಯದ ದಿವಾನರಾಗಿದ್ದ ಕೆ ಶೇಷಾದ್ರಿ ಅಯ್ಯರ್ ಅವರು, ಮೈಸೂರು ರಾಜ್ಯದಲ್ಲಿ ಪ್ರಥಮವಾಗಿ ನಗರಾಭಿವೃದ್ಧಿ ಸಮಿತಿಯೊಂದನ್ನು ರಚಿಸಿ, ೨೯೧ ಎಕರೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ನಿರ್ಧರಿಸಿ, ಅವರ ಮಾರ್ಗದರ್ಶನದಲ್ಲಿ ನಗರಾಭಿವೃದ್ಧಿ ಸಮಿತಿ ಕಾರ್ಯೋನ್ಮುಖವಾಯಿತು.

ಆಗಿನ ಕಾಲದ ಪುರಾತನ ಮಲ್ಲೇಶ್ವರದ ದೇಗುಲದಿಂದಾಗಿ ಹಾಗೂ ಈ ಪ್ರದೇಶ ಕಾಡುಪ್ರದೇಶವಾಗಿದ್ದರಿಂದ, ಈ ದೇಗುಲಕ್ಕೆ ಕಾಡುಮಲ್ಲೇಶ್ವರ ಎಂದು ಹೆಸರು ಬಂದಿತು. ಈ ಬಡಾವಣೆಗೆ, ಈ ದೇವರ ಹಿನ್ನೆಲೆಯಲ್ಲಿ ಮಲ್ಲೇಶ್ವರ ಎಂದೇ ಹೆಸರಾಯಿತು. ಕ್ರಮೇಣ ಈ ಬಡಾವಣೆ ಜನಸಂಖ್ಯೆ ಹೆಚ್ಚಿದಂತೆ ಅವಶ್ಯಕತೆಗಳಿಗೆ ಅನುಗುಣವಾಗಿ ಬಡಾವಣೆ ವಿಸ್ತಾರವಾಗಿ ಶೇಷಾದ್ರಿಪುರ, ಕುಮಾರಪಾರ್ಕ್ ಪಶ್ಚಿಮ, ಪ್ಯಾಲೇಸ್ ಗುಟ್ಟಹಳ್ಳಿ, ವೆಂಕಟರಂಗಪುರ, ವಯ್ಯಾಲಿಕಾವಲ್, ಗಾಯತ್ರಿದೇವಿ ಪಾರ್ಕ್ ಬಡಾವಣೆ, ರಂಗನಾಥಪುರ ಎಂದು ವಿಂಗಡಿಸಲಾಯಿತು.

ಜಾಗತೀಕರಣದ ಪ್ರಭಾವ ಎಲ್ಲ ಕಡೆ ವ್ಯಾಪಿಸಿದಂತೆ ಈ ಬಡಾವಣೆಯು ಆಧುನಿಕ ಮೋಹ ಜಾಲಕ್ಕೆ ಸಿಲುಕಿದೆ. ದೇವಸ್ಥಾನದ ರಸ್ತೆಯಿಂದ ಪ್ರಾರಂಭವಾಗುವ ಬಡಾವಣೆಯು, ರೈಲ್ವೆ ಹಳಿಗಳು ಹಾದು ಹೋಗುವ ಹತ್ತನೇ ಮುಖ್ಯರಸ್ತೆತನಕ ವ್ಯಾಪಿಸಿದೆ. ಮೆಜೆಸ್ಟಿಕ್ ನಿಂದ ಯಶವಂತಪುರಕ್ಕೆ ಸಂಪರ್ಕ ಕಲ್ಪಿಸುವ ಸಂಪಿಗೆ ರಸ್ತೆಯು, ಮಲ್ಲೇಶ್ವರದ ಒಂದನೇಕ್ರಾಸ್ ನಿಂದ ಹದಿನೆಂಟನೇ ಕ್ರಾಸ್‌ತನಕ ವಿಸ್ತಾರವಾಗಿದೆ. ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾಗಿದ್ದ ೧೦೦–೧೨೦, ೮೦–

೧೦೦ ಅಳತೆಯ ದೊಡ್ಡ ಬಂಗಲೆಗಳು, ಹಳೆಯ ಕಾಲದ ಮನೆಗಳು ಬುಲ್ಡೋಜರ್ ದಾಳಿಗೆ ತುತ್ತಾಗಿ ಬಹು ಮಹಡಿಗಳ ಅಪಾರ್ಟ್‌ಮೆಂಟ್‌ಗಳು ತಲೆಯೆತ್ತಿವೆ.

ಇಲ್ಲಿನ ದೇವಸ್ಥಾನದ ರಸ್ತೆ ಹೆಸರಿಗೆ ತಕ್ಕ ಹಾಗೆ ಅನ್ವರ್ಥವಾಗಿ, ಪ್ರಮುಖ ದೇವಾಲಯಗಳು ಮತ್ತು ಅಲ್ಲಿ ಜರಗುವ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಭಕ್ತಾದಿಗಳನ್ನು ನಿರಂತರವಾಗಿ ಸೆಳೆಯುತ್ತವೆ. ಈ ರಸ್ತೆಯಲ್ಲಿ ಕಾಡುಮಲ್ಲೇಶ್ವರ ದೇವಸ್ಥಾನ, ದಕ್ಷಿಣಮುಖಿ ನಂದಿ ದೇವಸ್ಥಾನ, ನರಸಿಂಹಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯ ದೇವಸ್ಥಾನ, ಗಂಗಮ್ಮನ ದೇವಸ್ಥಾನ, ಇತ್ತೀಚೆಗೆ ಕೆಲ ವರ್ಷಗಳ ಹಿಂದೆ ನಿರ್ಮಾಣಗೊಂಡ ತಿರುಪತಿಯ ಟಿಟಿಡಿ ಸಂಸ್ಥೆಗೆ ಸೇರಿದ ಶ್ರೀ ವೆಂಕಟೇಶ್ವರನ ದೇವಸ್ಥಾನ, ಇತ್ಯಾದಿ ದೇವಸ್ಥಾನಗಳು ಅಪಾರ ಸಂಖ್ಯೆಯಲ್ಲಿ ಭಕ್ತರನ್ನು ಆಕರ್ಷಿಸುತ್ತವೆ. ಸಂಪಿಗೆ ರಸ್ತೆಯಲ್ಲಿ ಪ್ರಸಿದ್ಧವಾದ ಶ್ರೀ ಶಿರಡಿ ಸಾಯಿ ಮಂದಿರ, ಹನ್ನೊಂದನೇ ಅಡ್ಡರಸ್ತೆಯಲ್ಲಿರುವ ಪುರಾತನ ಶ್ರೀ ಕೃಷ್ಣ ಮಂದಿರ, ಪೂರ್ವ ಉದ್ಯಾನ ರಸ್ತೆಯಲ್ಲಿರುವ ಶ್ರೀರಾಮ ಮಂದಿರ, ದೊಡ್ಡ ಗಣಪತಿ ದೇವಸ್ಥಾನ, ಶ್ರೀ ರಾಘವೇಂದ್ರ ಮಠ, ೮ನೇ ಅಡ್ಡರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ, ಎಂಟನೇ ಮುಖ್ಯರಸ್ತೆಯಲ್ಲಿರುವ ಚರ್ಚ್, ಹದಿನೆಂಟನೇ ಕ್ರಾಸ್‌ನಲ್ಲಿರುವ ಸರ್ಕಲ್ ಮಾರಮ್ಮ ದೇವಸ್ಥಾನಗಳು ಪ್ರಸಿದ್ಧಿಯಾಗಿ ಭಕ್ತಾದಿಗಳನ್ನು ಸೆಳೆಯುವ ಭಕ್ತಿ ತಾಣಗಳಾಗಿವೆ.

ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ, ಆಧ್ಯಾತ್ಮಿಕ ಸಾಹಿತ್ಯ–ಸಾಂಸ್ಕೃತಿಕ ಕಾರ್ಯಕ್ರಮಗಳೂ ಈ ಬಡಾವಣೆಯಲ್ಲಿ ಕಲಾರಸಿಕರ ಮನಸ್ಸನ್ನು ಆಹ್ಲಾದಗೊಳಿಸುತ್ತವೆ. ಶ್ರೀರಾಮ ಮಂದಿರ, ಗಾಂಧಿ ಸಾಹಿತ್ಯ ಸಂಘ, ಸೇವಾಸದನ, ಅನನ್ಯ ಸಭಾಂಗಣ, ಚೌಡಯ್ಯ ಮೆಮೋರಿಯಲ್ ಹಾಲ್ – ಈ ಸ್ಥಳಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಶಿವರಾತ್ರಿಯಲ್ಲಿ ಕಾಡುಮಲ್ಲೇಶ್ವರ ದೇಗುಲದಲ್ಲಿ ಇಡೀ ದಿನ ಪೂಜಾದಿಗಳು ನಡೆಯುತ್ತವೆ. ಶಿವರಾತ್ರಿಯ ಮಾರನೇ ದಿನ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ಇರುತ್ತದೆ. ನಮ್ಮ ಹಳ್ಳಿಯ ಜಾನಪದ ಸೊಗಡಿನ ವಾತಾವರಣ, ಹೆಜ್ಜೆಹೆಜ್ಜೆಗೂ ಪ್ರಸಾದ, ಊಟದ ವ್ಯವಸ್ಥೆಗಳನ್ನು ಭಕ್ತರು ಹಿಂದಿನಿಂದಲೂ ನಡೆಸಿಕೊಂಡು ಬಂದಿದ್ದಾರೆ.



ಗೆಳೆಯರ ಗುಂಪಿನಿಂದ ಪ್ರತಿ ಹುಣ್ಣಿಮೆಯ ದಿನದಂದು, ಹುಣ್ಣಿಮೆ ಹಾಡು ಕಾರ್ಯಕ್ರಮ ನಡೆಯುತ್ತದೆ.

ಸಂಪಿಗೆ ರಸ್ತೆ ಮತ್ತು ಬೇವಿನ ಮರದ ರಸ್ತೆಗಳಲ್ಲಿ ಆಭರಣ ಹಾಗೂ ಸೀರೆಗಳ ದೊಡ್ಡದೊಡ್ಡ ಅಂಗಡಿಗಳು ಪ್ರಾರಂಭವಾಗಿ, ಆ ರಸ್ತೆಗಳಲ್ಲಿ ಭೂಮಿಯ ಬೆಲೆ ಆಕಾಶಕ್ಕೇರಿದೆ. ೧೯೦೦ಕ್ಕೆ ಮೊದಲೇ ಪ್ರಾರಂಭವಾಗಿದ್ದ ರಾಜಾಮಿಲ್ ಸಾವಿರಾರು ಜನರಿಗೆ ಬದುಕನ್ನು ಕಟ್ಟಿಕೊಟ್ಟಿತು. ಸಂಪಿಗೆ ರಸ್ತೆಯಲ್ಲಿದ್ದ "Mysore Spinning and Weaving Mill" ಇದೀಗ ನೆಲಸಮವಾಗಿದ್ದು, ಆಧುನಿಕತೆಯ ಆಕರ್ಷಣೆಯ ಮಂತ್ರಿ ಮಾಲ್ ಆಗಿದೆ. ಆಗಿನ ಕಾಲದಲ್ಲಿ ಜಟಕಾಬಂಡಿಗಳು ಮಾತ್ರ ಸಂಚಾರ ವ್ಯವಸ್ಥೆಯನ್ನು ಮಾಡುತ್ತಿದ್ದವು. ಇದೀಗ ರಸ್ತೆಯಲ್ಲಿ ದ್ವಿಚಕ್ರ ವಾಹನ, ಆಟೋ, ಕಾರು, ಬಸ್ಸುಗಳ ಭರಾಟೆ. ಇತ್ತೀಚೆಗೆ ರೂಪುಗೊಂಡ ಮೆಟ್ರೋರೈಲು, ಸಂಚಾರದ ವ್ಯವಸ್ಥೆಯನ್ನು ಸುಗಮಗೊಳಿಸಿದ್ದರೂ ಟ್ರಾಫಿಕ್ ಸಮಸ್ಯೆ, ಪಾರ್ಕಿಂಗ್ ಸಮಸ್ಯೆಗಳಿಗೆ ಪರಿಹಾರ ದೊರಕಿಲ್ಲ. ಇಲ್ಲಿನ ಜನತಾ ಹೋಟೆಲ್, ಶ್ರೀಸಾಗರ, ಅಯ್ಯರ್ಸ್‌ಇನ್, ಬೈಟುಕಾಫಿ, ಪಾಕಶಾಲೆ, ಶಾಂತಿಸಾಗರ, ಇಡ್ಲಿಗೆ ಪ್ರಸಿದ್ಧವಾದ ವೀಣಾ ಸ್ಟೋರ್ಸ್, ರೈಲ್ವೆ ನಿಲ್ದಾಣದ ಭಟ್ಟರ ಹೋಟೆಲ್– ಇವುಗಳು ತಿನಿಸು ಪ್ರಿಯರ ಹಸಿವನ್ನು, ನಾಲಿಗೆ ರುಚಿಯನ್ನು ತಣಿಸುತ್ತಿದೆ.

❑

# ಮಲ್ಲೇಶ್ವರದ ಸಂಕ್ಷಿಪ್ತ ಚರಿತ್ರೆ

ಮಹಾರಾಜ ಶಹಜಿಗೆ ಜಹಗೀರಾಗಿ ಬಂದಿದ್ದ ಬೆಂಗಳೂರು ಪ್ರಾಂತವು, ಶಹಾಜಿಯ ನಂತರ ಅವರ ಮಗ ವೆಂಕಾಜಿಯ ವಶಕ್ಕೆ ಬಂದಿತ್ತು. ವೆಂಕಾಜಿಯು ಬೆಂಗಳೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಕಾಲದಲ್ಲಿ, ಕೆಂಪೇಗೌಡರ ಕಾಲದ ಕೆರೆಗಳು, ದೇವಸ್ಥಾನಗಳು ಚೆನ್ನಾಗಿಯೇ ಇದ್ದವು. ಸಂಪಿಗೆ ಕೆರೆ ಕುಡಿಯುವ ನೀರಿಗೆ ಆಶ್ರಯವಾಗಿತ್ತು.

ವೆಂಕಾಜಿಯ ಕಾಲದ ಕುರುಹಾಗಿ ಈಗಲೂ ಉಳಿದುಕೊಂಡಿರುವ ಒಂದು ಐತಿಹಾಸಿಕ ಸ್ಥಳವೆಂದರೆ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನ ಮಾತ್ರವಾಗಿದೆ. ಬೆಂಗಳೂರು ಉತ್ತರ ದಿಕ್ಕಿನಲ್ಲಿರುವ ಮಲ್ಲಾಪುರ ಹಳ್ಳಿಯ ಬಳಿ ವೆಂಕಾಜಿಯು ಕುದುರೆ ಮೇಲೆ ಹೋಗುತ್ತಿದ್ದಾಗ, ಶಿವಲಿಂಗವೊಂದು ಕಣ್ಣಿಗೆ ಬಿದ್ದಿತು. ಹಳ್ಳಿಯವರ ಕೋರಿಕೆಯ ಮೇರೆಗೆ, ಈ ಲಿಂಗವಿದ್ದ ಕಡೆ ಒಂದು ದೇವಸ್ಥಾನ ಕಟ್ಟಿದನು. ದೇವರಿಗೆ ನಿತ್ಯ ಪೂಜಾದಿಗಳನ್ನು ಮಾಡಲು ದೇವಸ್ಥಾನದ ಸಮೀಪದಲ್ಲಿಯೇ ಇದ್ದ ಮೇದರ ನಿಂಗನಹಳ್ಳಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟಿರುತ್ತಾನೆ. ಕಾಡುಮಲ್ಲೇಶ್ವರ ದೇಗುಲದ ಪಕ್ಕದ ಬಂಡೆಯಲ್ಲಿ, ಈ ದಾನ ಪತ್ರದ ದಾಖಲೆ ಶಾಸನದಲ್ಲಿ ಮೂಡಿದೆ. ಈ ಶಾಸನದ ಕನ್ನಡದ ರೂಪ: "ಸೌಮ್ಯ ಸಂವತ್ಸರ ಮಾರ್ಗಶಿರ ಶುದ್ಧ ಶ್ರೀಮತು ಮಲ್ಲಪುರದ ಮಲ್ಲಿಕಾರ್ಜುನ ದೇವರ ದೇವಮಾನ್ಯಕ್ಕೆ ವೆಂಕೋಜಿರಾಯನ ಬೆಂಗಳೂರು ಮಹಾನಾಡು ಕೇಳಲಿಕ್ಕಾಗಿ ಮೇದರ ಲಿಂಗನ ಹಳ್ಳಿಯ ಧರ್ಮಕ್ಕೆ ಕೊಟ್ಟನು ಧರ್ಮಕ್ಕೆ ವಕ್ರ ಮಾಡಿದವರು ಕತ್ತೆಯ ಕಾಗೆಯ ಚಂಡಾಲರ ಜನ್ಮದಲಿ ಹುಟ್ಟುವರು



ಮುಸಲಮಾನನಾದವನು ಮಕೆಯಲಿ ಹಂದಿಯ ತಿಂದ ಬ್ರಾಹ್ಮಣ ವೈಶ್ಯ ಶೂದ್ರ ಕಾಶಿಯಲ್ಲಿ ಗೋವ ಕೊಂದ ಪದಕ್ಕ ಹೋಗುವ(ರು)".

ಮುಸಲ್ಮಾನರ ದಾಳಿ ಮೈಸೂರು ಪ್ರಾಂತದಲ್ಲಿ ಆದಾಗ ಬಿಜಾಪುರದ ರಣದುಲ್ಲಾಖಾನನು ೧೬೨೮ರಲ್ಲಿ ಬೆಂಗಳೂರಿನಲ್ಲಿ ಇಮ್ಮಡಿ ಕೆಂಪೇಗೌಡನನ್ನು ಸೋಲಿಸಿದನು. ಇವನ ಸಲಹೆಯಂತೆ ಬೆಂಗಳೂರನ್ನು ಆಳಲು ಶಹಜಿಗೆ ಅವಕಾಶ ಕೊಟ್ಟನು. ಆಗ ಮರಾಠರ ಪ್ರಾಬಲ್ಯ, ಅವರಿಗೆ ಬೆಂಗಳೂರಿನಲ್ಲಿ ನೆಲೆಸಲು ಉದ್ಯೋಗ ಕೊಟ್ಟಿದ್ದರಿಂದ, ಮರಾಠಿ ವಂಶಸ್ಥರು ಬೆಂಗಳೂರಿನಲ್ಲಿ ನೆಲೆಸಿದರು. ಬ್ರಿಟಿಷರ ವಿರುದ್ಧ ಹೋರಾಟವನ್ನು ಶಿವಾಜಿ ಮಹಾರಾಜ ಸಮರ್ಥವಾಗಿ ಮಾಡಿದ್ದಾನೆ. ಮುಂದೆ ಹೈದರಾಲಿ ಬೆಂಗಳೂರನ್ನು ವಶಪಡಿಸಿಕೊಂಡು, ನಗರದ ಅಭಿವೃದ್ಧಿಗೆ ಕಾಣಿಕೆ ಕೊಟ್ಟಿದ್ದನು. ಆದರೆ ಮತೀಯ ದ್ವೇಷದಿಂದಾಗಿ ಅವರ ವರ್ಚಸ್ಸು ಕಡಿಮೆ ಆಯಿತು ಎಂದು ಹೇಳಬಹುದು.

ಈ ಎಲ್ಲಾ ಯುದ್ಧಗಳು ನಡೆದ ಮೇಲೆ ಮೈಸೂರು ಮಹಾರಾಜರ ಆಡಳಿತ ಬ್ರಿಟಿಷರು ದೇಶ ಬಿಟ್ಟು ಹೋಗುವಾಗ ಇತ್ತು. ಆಧುನಿಕ ಮೈಸೂರು ಪ್ರಾಂತದ ಅಭಿವೃದ್ಧಿಗೆ ಮೈಸೂರು ರಾಜರ ಕೊಡುಗೆ ಅನನ್ಯವಾದುದು. ಅನಂತರ, ಮಹಾತ್ಮ ಗಾಂಧೀಜಿ ಪ್ರಭಾವದ ಸ್ವಾತಂತ್ರ್ಯ ಚಳುವಳಿ ಅತೀವ ಪರಿಣಾಮ ಬೀರಿ, ನಮ್ಮ ದೇಶ ಪರಕೀಯರ ಆಡಳಿತದಿಂದ ಮುಕ್ತವಾಯಿತು, ಸ್ವತಂತ್ರ ಭಾರತ ರೂಪುಗೊಂಡಿತು.

ಮಲ್ಲೇಶ್ವರದಲ್ಲಿ ೧೮೯೨ರಲ್ಲಿ ಪದ್ಮರಾಜ ಪಂಡಿತ ಎಂಬ ಜೈನ ವಿದ್ವಾಂಸರು ಮುದ್ರಣಾಲಯವನ್ನು ಪ್ರಾರಂಭಿಸಿ, ಅನೇಕ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

ಈ ಬಡಾವಣೆಯಲ್ಲಿ ಸಾರಸ್ವತ ಜನಾಂಗದವರು ಉದ್ಯೋಗಗಳಿಗಾಗಿ ಇಲ್ಲಿ ನೆಲೆಸಿ, ತಮ್ಮ ಸಂಸ್ಕೃತಿ–ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಮಾರಂಭಗಳಿಗಾಗಿ ಕೆನರಾ ಯೂನಿಯನ್ ಎಂಬ ಸಂಸ್ಥೆಯನ್ನು ೧೯೦೦ರಲ್ಲಿ ಪ್ರಾರಂಭಿಸಿದರು. ೧೯ನೇ ಶತಮಾನದ ಆರಂಭಿಕ ಕಾಲದಲ್ಲಿ, ಶ್ರೀವೈಷ್ಣವ ಸಂಪ್ರದಾಯಸ್ಥರು 'ಉಭಯ ವೇದಾಂತ ಪ್ರವರ್ತನಾ ಸಭಾ' ಎಂಬ ಸಂಸ್ಥೆಯನ್ನು

೧೦ನೇ ಕ್ರಾಸ್ ನಲ್ಲಿರುವ ಪೂರ್ವ ಉದ್ಯಾನರಸ್ತೆಯಲ್ಲಿ ಪ್ರಾರಂಭ ಮಾಡಿದರು. ಅದು ಇದೀಗ ಕಲ್ಯಾಣ ಮಂದಿರವಾಗಿ ರೂಪುಗೊಳ್ಳುವುದರ ಜೊತೆಗೆ, ಆಚಾರ–ಸಂಪ್ರದಾಯಗಳಿಗೆ, ತಮ್ಮ ಸಮುದಾಯದ ಅಭಿವೃದ್ಧಿಗಾಗಿ ಕಚೇರಿಯನ್ನು ಸ್ಥಾಪಿಸಿಕೊಂಡಿದ್ದಾರೆ.

೨೦–೦೬–೧೯೨೦ರಲ್ಲಿ ಹಲವು ಹಿರಿಯರ ನಾಗರಿಕರು ಹಣಕಾಸಿನ ವ್ಯವಸ್ಥೆಗಾಗಿ 'ಮಲ್ಲೇಶ್ವರಂ ಕೋ ಆಪರೇಟಿವ್ ಬ್ಯಾಂಕ್'ಅನ್ನು ಸ್ಥಾಪಿಸಿದರು. ಶತಮಾನವನ್ನು ಪೂರೈಸಿರುವ ಈ ಸಹಕಾರ ಬ್ಯಾಂಕ್, ಬಡಾವಣೆಯ ನಾಗರಿಕರಿಗೆ ಉತ್ತಮವಾಗಿ ಬ್ಯಾಂಕಿಂಗ್ ಸೌಲಭ್ಯ ನೀಡುತ್ತಿದೆ.

೧೯೧೩ನೇ ಇಸವಿಯಲ್ಲಿ ಸರಕಾರದವರು ಅಂಚೆ ಮತ್ತು ತಂತಿ ಕಚೇರಿಯನ್ನು ಪ್ರಾರಂಭಿಸಿದರು. ೧೯೩೦ರ ಸಂದರ್ಭದಲ್ಲಿ ನಿವಾಸಿಗಳಿಗೆ ಪ್ರಯಾಣದ ಸವಲತ್ತು ಎಂದರೆ ಜಟಕಾಬಂಡಿಗಳು. ಅದನ್ನು ಸಾರೋಟು ಎಂದು ಕರೆಯುತ್ತಿದ್ದರು. ಆಗಿನ ಕಾಲದಲ್ಲಿ ಮೇಲುದರ್ಜೆಯ ಜನ ಮಾತ್ರ ಈ ಸಾರೋಟನ್ನು ಉಪಯೋಗಿಸುತ್ತಿದ್ದರು.

೦೮–೦೮–೧೯೨೭ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಟ್ಟಾಭಿಷೇಕದ ರಜತ ಮಹೋತ್ಸವದ ಕಾರ್ಯಕ್ರಮಕ್ಕಾಗಿ ಸೇರಿದ್ದ ಅನುಕೂಲಸ್ಥ ಮತ್ತು ವಿದ್ಯಾವಂತ ಮಹಿಳೆಯರು, ೧೯೨೭ರಲ್ಲಿ 'ಮಲ್ಲೇಶ್ವರ ಲೇಡೀಸ್ ಅಸೋಸಿಯೇಷನ್' ಪ್ರಾರಂಭ ಮಾಡಿದರು. ಇದರ ಸ್ಥಾಪಕ ಅಧ್ಯಕ್ಷರು ಶ್ರೀಮತಿ ಹೆಚ್ ವಿ ಭಾಗೀರಥಮ್ಮನವರು. ಇಂದು ಕದವನ್ನು ತಟ್ಟುತ್ತಿರುವ ಈ ಪ್ರತಿಷ್ಠಿತ ಸಂಸ್ಥೆಯು ಎಂ.ಎಲ್.ಎ. ಕಾಲೇಜು ಎಂದೇ ಪ್ರಸಿದ್ಧವಾಗಿದೆ.

ಸಿದ್ಧವನಹಳ್ಳಿ ಕೃಷ್ಣಶರ್ಮ, ಜಿ.ಪಿ. ರಾಜರತ್ನಂ, ತಿ.ತಾ. ಶರ್ಮ, ಹೆಚ್.ವಿ. ನಂಜುಂಡಯ್ಯ, ಎಚ್ ವಿ ಸಾವಿತ್ರಮ್ಮ, ಹೊ ವೆ ಶ್ರೀನಿವಾಸಯ್ಯ ಮುಂತಾದ ಪ್ರಾತಃ ಸ್ಮರಣೀಯರು ಈ ಬಡಾವಣೆಯಲ್ಲಿ ವಾಸಿಸುತ್ತಿದ್ದರು. ಕರ್ನಾಟಕ ವ್ಯಾಪ್ತಿಯಲ್ಲಿ ದಿಗ್ಗಜರಾಗಿ ಬೆಳೆದ ಈ ಮಹನೀಯರುಗಳು, ರಾಷ್ಟ್ರಮಟ್ಟದಲ್ಲೂ ಸುಪ್ರಸಿದ್ಧರಾದರು.

❑

## ಬೆಂಗಳೂರು ನಗರ ಹಾಗೂ ಮಲ್ಲೇಶ್ವರದಲ್ಲಿ ಸ್ವಾತಂತ್ರ್ಯದ ಕಿಚ್ಚು

ಮೈಸೂರು ಅಂದು ದೇಶೀಯ ಸಂಸ್ಥಾನ. ರಾಜ ನಮ್ಮವನೇ ಆದರೂ, ಬ್ರಿಟಿಷ್ ಅಂಕುಶದಲ್ಲಿ ಆಳಲ್ಪಡುತ್ತಿದ್ದ ಕಾಲವದು. ಆಗ ಮಹಾರಾಜರದು ಜನಪರ ಆಡಳಿತ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಂಥ ಅಭಿವೃದ್ಧಿ ಪಥದ ಹರಿಕಾರರ ಜೊತೆಗೆ, ಮೈಸೂರು ಪ್ರಾಂತ್ಯದ ಅಭಿವೃದ್ಧಿಯ ವಾಸ್ತುಶಿಲ್ಪಿ ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲ. ಆ ಕಾಲದಲ್ಲಿ ಭದ್ರಾವತಿ ಉಕ್ಕಿನ ಕಾರ್ಖಾನೆ, ಬೆಂಗಳೂರು ಸಾಬೂನು ಕಾರ್ಖಾನೆ, ಮೈಸೂರಿನಲ್ಲಿ ಕೃಷ್ಣರಾಜೇಂದ್ರ ಜಲಾಶಯ ಸ್ಥಾಪಿಸಿದ್ದರು. ಅವರು ಪ್ರಾರಂಭಿಸಿದ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಜಾತಿ ಭೇದ ಇಲ್ಲದೆ ಎಲ್ಲ ಪಂಗಡಗಳಿಗೂ ಅಧಿಕಾರದಲ್ಲಿ ಪಾಲ್ಗೊಳ್ಳಲು ಅವಕಾಶವಿತ್ತು. ಹೀಗಾಗಿ ಮೈಸೂರು ಪ್ರಾಂತದಲ್ಲಿ ಬಹು ಹೆಚ್ಚಿನ ಮಟ್ಟದಲ್ಲಿ ಸ್ವಾತಂತ್ರ ಸಂಗ್ರಾಮ ನಡೆಯಲಿಲ್ಲ.

೧೮೮೧ರಲ್ಲಿ ದಿವಾನ್ ರಂಗಾಚಾರ್ಯರು ಪ್ರಜಾ ಪ್ರತಿನಿಧಿ ಸಭೆ ಪ್ರಾರಂಭಿಸಿದರು. ಆಗ ರಾಷ್ಟ್ರ ಪ್ರೇಮದ ಕಿಚ್ಚು ಮೂಡಿಸುತ್ತಿದ್ದ 'ದಿ ಹಿಂದೂ', 'ಸ್ವರಾಜ್ಯ', 'ಕ್ರಾಂತಿ', 'ಹರಿಜನ' ಪತ್ರಿಕೆಗಳು ರಾಷ್ಟ್ರವ್ಯಾಪ್ತಿ ಪ್ರಸಾರವಾಗಿ, ಭಾರತೀಯರಲ್ಲಿ ದೇಶಭಕ್ತಿ ಉದ್ದೀಪನ ಮಾಡುವಂತೆ ಪ್ರೇರೇಪಿಸುತ್ತಿದ್ದವು. ೧೯೨೪ರಲ್ಲಿ ಡಾಕ್ಟರ ಹರ್ಡೀಕರರ ಸೇವಾದಳ ಪ್ರಾರಂಭವಾಯಿತು. ಸೇವಾದಳದ ಮೂಲಕ ದೇಶದಾದ್ಯಂತ ಲಕ್ಷಾಂತರ ಜನ ದೇಶಭಕ್ತ ಕಾರ್ಯಕರ್ತರನ್ನು ತಯಾರು ಮಾಡಿದರು. ಸೂರ್ಯೋದಯಕ್ಕೆ ಮುಂಚೆಯೇ ಯುವಕರನ್ನು

ಸೇರಿಸಿ ಪ್ರಭಾತ್ ಪೇರಿ ಮಾಡುವುದು, ಬ್ರಿಟಿಷ್ ಸರ್ಕಾರದ ವಿರುದ್ಧ ಪಿಕೆಟಿಂಗ್ ಮಾಡುವುದು, ಮೊದಲಾದವುಗಳನ್ನು ಮಾಡಲು ಸೇವಾದಳವನ್ನು ಸೂಕ್ತ ವೇದಿಕೆಯನ್ನಾಗಿ ಬಳಸಿಕೊಂಡರು. ಮೈಸೂರು ಪ್ರಾಂತದಲ್ಲಿ 'ವೀರಕೇಸರಿ' ಪತ್ರಿಕೆಯ ಸಂಪಾದಕ ಸೀತಾರಾಮಶಾಸ್ತ್ರಿಗಳು, ಮುದ್ರಕರಾದ ಅಶ್ವತ್ಥನಾರಾಯಣರ ಮೇಲೆ ಸರ್ಕಾರ ರಾಜದ್ರೋಹದ ಮೊಕದ್ದಮೆ ಹೂಡಿತು.

೦೮–೦೮–೧೯೪೨ರಲ್ಲಿ ಅಹಿಂಸಾವಾದಿ ಆಂದೋಲನದ ನೇತಾರ ಮೋಹನ್‌ದಾಸ್ ಕರಮಚಂದ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಡಾಕ್ಟರ್ ಮೌಲಾನಾ ಅಬ್ದುಲ್ ಕಲಾಂ ಆಜಾದ್, ಮುಂತಾದ ಕಾಂಗ್ರೆಸ್ ನಾಯಕರನ್ನು ಬ್ರಿಟಿಷ್ ಸರ್ಕಾರ ಬೊಂಬಾಯಿಯಲ್ಲಿ ಬಂಧಿಸಿತು. ೧೧–೦೮–೧೯೪೨ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಸುಬ್ರಹ್ಮಣ್ಯಂರವರ ಬಂಧನವಾಯಿತು. ಮೈಸೂರು ಕಾಂಗ್ರೆಸ್ ಸಮಿತಿ, ನಗರ ಕಾಂಗ್ರೆಸ್ ಸಮಿತಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿಗಳು ನ್ಯಾಯ ಬಾಹಿರ ಸಂಸ್ಥೆಗಳೆಂದು ಘೋಷಿಸಲ್ಪಟ್ಟವು.

೧೯೪೨ರ ಆಗಸ್ಟ್ ತಿಂಗಳ ೧೧ನೇ ತಾರೀಕು ಮೈಸೂರು ಬ್ಯಾಂಕ್ ಚೌಕದಲ್ಲಿ ಸರ್ಕಾರದ ಧೂರ್ತ ಕ್ರಮಗಳನ್ನು ಪ್ರತಿಭಟಿಸಲು, ಸಹಸ್ರಾರು ಸಂಖ್ಯೆಯಲ್ಲಿ ಸ್ವಯಂಸೇವಕರು ಸೇರಿದ್ದರು. ಅಲ್ಲಿ ಸೇರಿದ್ದ ಸ್ವಾತಂತ್ರ್ಯ ಸೇನಾನಿಗಳು, ಅವಿನ್ಯೂ ರಸ್ತೆಯ ಅಂಚೆ ಕಚೇರಿಗೆ ಮುತ್ತಿಗೆ ಹಾಕಿದರು. ಆಗ ರಾಷ್ಟ್ರವ್ಯಾಪ್ತಿ ಸ್ವಾತಂತ್ರ್ಯದ ಕಿಚ್ಚು ಆವರಿಸಿದ್ದ ಕಾಲ. ಸಹಸ್ರಾರು ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಸೇರಿದ್ದ ಈ ಬೃಹತ್ ಜಾಥಾವನ್ನು ಚದುರಿಸಲು ಬ್ರಿಟಿಷ್ ಸೈನಿಕರು ಲಾಠಿ ಪ್ರಹಾರ ಮಾಡಿದರು. ಸತ್ಯಾಗ್ರಹಿಗಳು ಲಾಠಿ ಪ್ರಹಾರಕ್ಕೆ ಬಗ್ಗದಿದ್ದಾಗ ಅಶ್ರುವಾಯು ಸಿಡಿಸಿ ಚಳವಳಿಯನ್ನು ದಮನಗೊಳಿಸಲು ಪ್ರಯತ್ನ ಮಾಡಿದರು. ಪುರುಷರ ಜೊತೆ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಿರಿದಾದ ರಸ್ತೆಗಳಲ್ಲಿ ಪೊಲೀಸರು ಕುದುರೆ ಮೇಲೆ ಬರುವಾಗ ಅವುಗಳು ಜಾರಿಬಿದ್ದು ಮೇಲಿದ್ದ ಸವಾರರಿಗೆ (ಬ್ರಿಟಿಷ್ ಪೊಲೀಸರು) ತೊಂದರೆ ಆಗಲಿ ಎಂದು ಸತ್ಯಾಗ್ರಹಿಗಳು ದಾರಿಯುದ್ದಕ್ಕೂ ರಾಗಿ ಸುರಿಯುತ್ತಿದ್ದರು. ಪೊಲೀಸರ ಗುಂಡಿನ ದಾಳಿಯಿಂದ ಸುಮಾರು ೧೫೦ ಜನ ಹುತಾತ್ಮರಾದರು ಎಂದು ದಾಖಲೆಯಿದೆ.



ಅದೇ ಸಂದರ್ಭದಲ್ಲಿ ಬಿನ್ನಿಮಿಲ್‌ನ ೭೦೦೦ ಕಾರ್ಮಿಕರು, ಮಲ್ಲೇಶ್ವರ ವ್ಯಾಪ್ತಿಯ ರಾಜಾ ಮಿಲ್‌ನ ೨೦೦೦ ಕಾರ್ಮಿಕರು, ಮಿನರ್ವ ಮಿಲ್‌ನ ಕಾರ್ಮಿಕರು ಸಂಬಳ ಹೆಚ್ಚು ಮಾಡಲು ಒತ್ತಾಯಿಸಿ ಮುಷ್ಕರ ಹೂಡಿದರು. ಕೆಲವು ನಾಯಕರು, ಈ ಕಾರ್ಮಿಕ ಚಳುವಳಿಯನ್ನು ಸ್ವತಂತ್ರ ಚಳವಳಿಯಾಗಿ ಪರಿವರ್ತಿಸಿದರು. ವಿದ್ಯಾರ್ಥಿಗಳ ಜತೆ ಕಾರ್ಮಿಕರು ಸೇರಿ ಕ್ವಿಟ್ ಇಂಡಿಯಾ ಚಳವಳಿಗೆ ಹೆಚ್ಚಿನ ಬಲ ಬಂದಿತು. ಎಚ್‌ಎಸ್ ದೊರೆಸ್ವಾಮಿ ಅಯ್ಯಂಗಾರ್, ಕಾರ್ಮಿಕ ನಾಯಕರಾದ ಎನ್ ಡಿ ಶಂಕರ್, ಕೆ ಎಸ್‌ಕುಮಾರನ್, ಟಿ ರಾಮರಾವ್ ಅವರುಗಳ ಮುಖಂಡತ್ವದಲ್ಲಿ ಕಾರ್ಮಿಕ ಸಂಘಟನೆಯು ಮುಷ್ಕರಗಳ ಮೂಲಕ, ಆನಂತರದಲ್ಲಿ ರಾಷ್ಟ್ರೀಯ ಜಾಗೃತಿಯ ದುಡಿಮೆಗೆ ಪ್ರೇರೇಪಿಸಿತು.

೧೯೪೦ರಿಂದ ೧೯೪೮ರತನಕ ಈ ಭಾಗಗಳಲ್ಲಿ ಸ್ವಾತಂತ್ರ್ಯ ಚಳವಳಿ ಬಿರುಸಿನ ರೂಪ ತಾಳಿದ್ದು, ೦೧–೦೪–೧೯೪೧ ರಲ್ಲಿ 'ರಾಜಾಮಿಲ್'ನ ಮತ್ತು 'ಮಿನರ್ವ ಮಿಲ್' ನ ಕಾರ್ಮಿಕರು ದಿನಗೂಲಿ ಏರಿಕೆಗಾಗಿ ಒಂದು ದಿನದ ಅಸಮಾಧಾನದ ಮುಷ್ಕರ ಮಾಡಿದರು. ಅದೇ ಕ್ರಮೇಣ ಸ್ವಾತಂತ್ರ್ಯ ಹೋರಾಟದ ಕಿಚ್ಚಾಗಿ ಪರಿವರ್ತನೆಗೊಂಡಿತು.

೧೯೪೨ರಲ್ಲಿ ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಸಾಹಿತ್ಯ ಹಾಗೂ ಮಾಹಿತಿಗಳ ಪ್ರಕಟಣೆ, ಗಾಂಧಿ ಪತ್ರಿಕೆಗಳ ಪ್ರಚಾರ ಮಾಡಿದ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯ ಚಳವಳಿಗೆ ಪ್ರೋತ್ಸಾಹ ಕೊಡಲು ೧೯೪೨ರಲ್ಲಿ ಮಲ್ಲೇಶ್ವರದ ಹಲವು ಮಹನೀಯರು ಮಲ್ಲೇಶ್ವರದ ಎಂಟನೇ ಅಡ್ಡರಸ್ತೆಯಲ್ಲಿ 'ಗಾಂಧಿ ಸಾಹಿತ್ಯ ಸಂಘ' ಪ್ರಾರಂಭ ಮಾಡಿದರು. ಸಿದ್ಧವನಹಳ್ಳಿ ಕೃಷ್ಣಶರ್ಮ, ಜಿ ಪಿ ರಾಜರತ್ನಂ, ಮುಂತಾದ ಲೇಖಕರು ದೇಶದ ಆಗಿನ ವಾರ್ತೆಗಳನ್ನು ಪ್ರಜೆಗಳಿಗೆ ತಿಳಿಸಲು, ದೇಶದ ಸಮಸ್ಯೆಗಳ ಬಗ್ಗೆ ಪತ್ರಿಕೆಯಲ್ಲಿ ಕ್ಷಕಿರಣ ಬೀರುತ್ತಾ, ಅಸಹಕಾರ ಚಳವಳಿ, ಜಾಗೃತಿ, ಖಾದಿಯ ಬಳಕೆ ಬಗ್ಗೆ ವಿಚಾರ ತಿಳಿಸುತ್ತಾ, ಚಳವಳಿಯ ಪ್ರಭಾವದಲ್ಲಿ ತಮ್ಮ ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಕುಮಾರ ಪಾರ್ಕ್ ಬಡಾವಣೆಯ ಗಾಂಧಿ ಭವನದ ನೆಲಮಾಳಿಗೆಯಲ್ಲಿ ಕೆ ಶ್ರೀನಿವಾಸರಾವ್ ಅವರು ಕಲ್ಲಚ್ಚನ್ನು ಉಪಯೋಗಿಸಿ ಕರಪತ್ರಗಳನ್ನು ಮುದ್ರಿಸುತ್ತಿದ್ದರು.

ಮಲ್ಲೇಶ್ವರಂ ಸರ್ಕಲ್ ಎಂದು ಪ್ರಸಿದ್ಧಿಯಾಗಿರುವ ಆಗಿನ ಮಲ್ಲೇಶ್ವರದ

ಚೌಕ ಅನೇಕ ವರ್ಷಗಳು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪೊಲೀಸರ ಕದನ ಕ್ಷೇತ್ರವಾಗಿತ್ತು. ಈ ಭಾಗದ ಗಿರಿಜಾಬಾಯಿ, ಕುಂತಳ, ವಿಮಲಾ, ಮುಂದಾದವರು ಸ್ವಾತಂತ್ರ್ಯದ ಬಾವುಟ ಹಿಡಿದು ಮೆರವಣಿಗೆ ಮಾಡಿದ್ದಾರೆ.

೧೯೩೭ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಲು ಪ್ರಮುಖ ಕಾರಣರು ಬೊಂಬಾಯಿಯ ನಾರಿಮನ್ನರು. ಇವರ ಬಂಧನವಾದ ಮೇಲೆ ಮೈಸೂರು ಪ್ರಾಂತ್ಯದಲ್ಲಿ ಚಳವಳಿ ತೀವ್ರ ಸ್ವರೂಪ ಪಡೆಯಿತು.

ಮಲ್ಲೇಶ್ವರಂ ಮಾರ್ಕೆಟ್‌ನಲ್ಲಿ ತರಕಾರಿ ಮಾರುತ್ತಿದ್ದ ವೆಂಕಟರಮಣಯ್ಯನ ಮಗ ತಿಮ್ಮಯ್ಯನನ್ನು (ತಿರುಮಲಯ್ಯ) ಪೊಲೀಸ್ ಇನ್ಸ್‌ಪೆಕ್ಟರ್ ಗುಂಡಿಕ್ಕಿ ಕೊಂದುದನ್ನು ಮಲ್ಲೇಶ್ವರದ ನಾರಾಯಣರಾಯರ ತಂಗಿ ತುಳಸಿಬಾಯಿ ಅವರು ಉಲ್ಲೇಖಿಸುತ್ತಾರೆ.

ಮಲ್ಲೇಶ್ವರದ ರೀಡಿಂಗ್ ರೂಂಗೆ ಗಾಂಧೀಜಿ ಬರುವುದನ್ನು ತಿಳಿದುಕೊಂಡು, ಕೆನರಾ ಯೂನಿಯನ್ನಿನ ಪರವಾಗಿ ಆನಂದಿಬಾಯಿ ಸಂಜೀವ್‌ರಾವ್, ಶಾಂತಾಬಾಯಿ ನಗರ್ಕರ್, ಶ್ರೀರಾಮಪುರದ ಶಾರದಾಂಬ, ಶ್ರೀಕಂಠಯ್ಯ ಅವರು ಗಾಂಧಿ ನಿಧಿಗಾಗಿ ನಾಗರಿಕರಿಂದ ೫ ರುಪಾಯಿ, ೧೦ ರುಪಾಯಿಗಳ ದೇಣಿಗೆ ಸಂಗ್ರಹಿಸಿ ಗಾಂಧಿ ನಿಧಿಗೆ ಅರ್ಪಿಸಿರುತ್ತಾರೆ.

ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವನ್ನು ವಹಿಸಿವೆ. ಬೆಂಗಳೂರಿನ 'ಸಂಪದಭ್ಯುದಯ', 'ವಿಶ್ವ ಕರ್ನಾಟಕ' ಇತ್ಯಾದಿ ಪತ್ರಿಕೆಗಳು, ಮಹಾತ್ಮ ಗಾಂಧಿಯವರ 'ಯಂಗ್ ಇಂಡಿಯಾ' ಮತ್ತು 'ಹರಿಜನ' ಪತ್ರಿಕೆ ಟಿ ಪ್ರಕಾಶಂ ಅವರ 'ಸ್ವರಾಜ್ಯ', 'ದಿ ಹಿಂದೂ' ಪತ್ರಿಕೆ, ತಮಿಳಿನಲ್ಲಿ ಮುದ್ರಿತವಾಗುತ್ತಿದ್ದ 'ಸ್ವದೇಶಿ ಮಿತ್ರನ್', ಮೈಸೂರು ವೆಂಕಟಕೃಷ್ಣಯ್ಯ ಅವರ 'ಸಾಧ್ವಿ', ಬೆಂಗಳೂರಿನ 'ಸೂರ್ಯೋದಯ ಪತ್ರಿಕೆ' (೧೯೦೭), ತಿ ತಾ ಶರ್ಮರ 'ವಿಶ್ವ ಕರ್ನಾಟಕ' ಪತ್ರಿಕೆ (೧೯೨೫), ಸಿ ಅಶ್ವತ್ಥನಾರಾಯಣರ 'ನವಜೀವನ' (೧೯೨೭), ಪಿ ಆರ್ ರಾಮಯ್ಯ ಅವರ 'ತಾಯಿನಾಡು', ಎಂ ಸೀತಾರಾಮ ಶಾಸ್ತ್ರಿಗಳ 'ವೀರಕೇಸರಿ' (೧೯೨೮), ಎಚ್ ಕೆ ವೀರಣ್ಣಗೌಡರ 'ಚಿತ್ರಗುಪ್ತ', ಬಿಎನ್ ಗುಪ್ತರ 'ಪ್ರಜಾಮತ', ಎಂ ರಾಮರಾಯರ 'ಸುಬೋಧ' ಮಾಸ ಪತ್ರಿಕೆ, ಈ ಎಲ್ಲ ಪತ್ರಿಕೆಗಳು ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜನರಲ್ಲಿ



ದೇಶಭಕ್ತಿ ಸ್ಫುರಿಸುವಂತೆ ಮಾಡಿ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಧುಮುಕಲು ಹುರಿದುಂಬಿಸುತ್ತಿದ್ದವು. ಬ್ರಿಟಿಷರ ದಬ್ಬಾಳಿಕೆಗೆ ತುತ್ತಾಗಿ ಕೆಲವು ಪತ್ರಿಕೆಗಳು ಸ್ಥಗಿತಗೊಂಡವು.

೧೯೦೮ರಲ್ಲಿ ಬೆಂಗಳೂರು ನಗರದಲ್ಲಿ ೯ ಪೌರಾಡಳಿತ ವಿಭಾಗಗಳಿದ್ದವು. ಅವುಗಳೆಂದರೆ ಅರಮನೆ, ಬಳೇಪೇಟೆ, ಮನೆವಾರ್ತೆ ಪೇಟೆ, ಅಲಸೂರು ಪೇಟೆ, ನಗರ್ತಪೇಟೆ, ಲಾಲ್‌ಬಾಗ್, ಕೋಟೆ, ಬಸವನಗುಡಿ ಮತ್ತು ಮಲ್ಲೇಶ್ವರ. ಕಾಲಕ್ರಮೇಣ ಬೆಂಗಳೂರು ಬೃಹತ್ತಾಗಿ ಬೆಳೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದ್ದು ಈಗ ಒಟ್ಟು ೧೯೮ ವಾರ್ಡ್‌ಗಳಿವೆ.

ಈ ಹಳೆಯ ಪೌರಾಡಳಿತದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಹೋರಾಟದ ಕೆಲವು ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಅವುಗಳಲ್ಲಿ ದಂಡುಪ್ರದೇಶ, ಮಲ್ಲೇಶ್ವರ, ಬೆಂಗಳೂರು ಪೇಟೆ ಪ್ರಮುಖವಾದವು.

❑

## ಮಲ್ಲೇಶ್ವರದ ಸ್ವಾತಂತ್ರ ಹೋರಾಟದ ಕಲಿಗಳು

### ಸಿದ್ಧವನಹಳ್ಳಿ ಕೃಷ್ಣಶರ್ಮ

ಸಿದ್ಧವನಹಳ್ಳಿ ಕೃಷ್ಣಶರ್ಮರು ಜನಿಸಿದ್ದು ೦೪–೦೭–೧೯೦೪ರಲ್ಲಿ, ಚಿತ್ರದುರ್ಗ ಜಿಲ್ಲೆಯ ದೊಡ್ಡಸಿದ್ದವನ ಹಳ್ಳಿಯಲ್ಲಿ. ಇವರು ಕೆಲವು ವರ್ಷ ಮಲ್ಲೇಶ್ವರದಲ್ಲಿ ನೆಲೆಸಿದ್ದರು. ಆದರೆ, ಇವರ ಕಾರ್ಯವ್ಯಾಪ್ತಿ ರಾಷ್ಟ್ರಾದ್ಯಂತ ಹರಡಿತ್ತು. ಶ್ರೇಷ್ಠ ಸಾಹಿತಿ, ವಿಚಾರವಾದಿ, ಸ್ವಾತಂತ್ರ್ಯ ಹೋರಾಟಗಾರ, ಅಪ್ರತಿಮ ವಾಗ್ಮಿ, ಗಾಂಧಿವಾದಿ, ಸಹಕಾರಿತಜ್ಞ, ಇವೆಲ್ಲ ವಿಶೇಷಣಗಳ ಜೊತೆಗೆ, ಗಾಂಧೀಜಿ ಅವರ ಒಡನಾಡಿ ಕೂಡಾ ಆಗಿದ್ದರು. ಸಿದ್ಧವನಹಳ್ಳಿ ಕೃಷ್ಣಶರ್ಮರು ಕಸ್ತೂರಿಬಾ, ಗಾಂಧೀಜಿಯವರ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ, ಆಶ್ರಮವಾಸಿಯಾಗಿದ್ದ ಮೀರಾ ಬೆಹನ್ ಇವರುಗಳ ವ್ಯಕ್ತಿ ಚಿತ್ರವನ್ನು, ಆಗಿನ ಚಳವಳಿಯ ವಿವಿಧ ಮಜಲುಗಳನ್ನು ಸಶಕ್ತವಾಗಿ ಸುಂದರವಾಗಿ ಕನ್ನಡ ಭಾಷೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

೧೯೪೨ರಲ್ಲಿ ಜಿ ಪಿ ರಾಜರತ್ನಂ, ಎಂ ಎ ಕೃಷ್ಣಸ್ವಾಮಿ, ಮಂಜುನಾಥ ಮುಂತಾದ ಗೆಳೆಯರನ್ನು ಸೇರಿಸಿಕೊಂಡು, ಮಲ್ಲೇಶ್ವರದಲ್ಲಿ 'ಗಾಂಧಿ ಸಾಹಿತ್ಯ ಸಂಘ'ವನ್ನು ಸ್ಥಾಪಿಸಿದರು. ಸಾಹಿತ್ಯದ ಸಂಸ್ಥೆ ಇಂದು ಹೆಸರಿಟ್ಟುಕೊಂಡರೆ ಆಳುವ ಸರ್ಕಾರದ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಳ್ಳಬಹುದು ಎಂಬುದು ಈ ಹಿರಿಯರ ಒಳನೋಟ. ಆಂತರ್ಯದಲ್ಲಿ ಪರೋಕ್ಷವಾಗಿ ಈ ಸಂಸ್ಥೆಯನ್ನು ಸ್ವಾತಂತ್ರ್ಯ ಚಳುವಳಿಗಾಗಿ ರೂಪಿಸಿಕೊಂಡಿರುತ್ತಾರೆ. ಕಳೆದ ೮೦ ವರ್ಷಗಳಿಂದ ದೇಶಭಕ್ತಿಯ ಸಾರ್ಥಕ ಸೇವೆ ಮಾಡುತ್ತಿರುವ ಈ ಸಂಸ್ಥೆ ಈಗಲೂ ಸಾಹಿತ್ಯ, ವಿಚಾರ ಸಂಕಿರಣಗಳು, ಗಾಂಧಿ ಜಯಂತಿ, ಮೌಲಿಕ ಉಪನ್ಯಾಸಗಳನ್ನು ಏರ್ಪಡಿಸುತ್ತಾ ಅತ್ಯಂತ ಸಕ್ರಿಯವಾಗಿದೆ. ಈ ಸಂಸ್ಥೆಗಾಗಿ ಹೊ ಶ್ರೀನಿವಾಸಯ್ಯ ಅವರು ದಶಕಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

'ಕ್ವಿಟ್ ಇಂಡಿಯಾ' ಕರೆಗೆ ಓಗೊಟ್ಟ ಸಿದ್ಧವನಹಳ್ಳಿ ಕೃಷ್ಣಶರ್ಮರು, ಸತ್ಯಾಗ್ರಹದಲ್ಲಿ ಪಾಲ್ಗೊಂಡು ಸೆರೆಮನೆ ವಾಸವನ್ನು ಹಿಡಿದ, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಅಮೂಲ್ಯ ಪರಿಶ್ರಮ, ಜೀವವನ್ನು ತೇದ ಕನ್ನಡ ಸಾಹಿತಿಗಳಲ್ಲಿ ಕೃಷ್ಣಶರ್ಮರು ಪ್ರಮುಖರು. ಪತ್ರಿಕಾ ಲೇಖನಕ್ಕೆ ಸಾಹಿತ್ಯದ ಮೌಲ್ಯ, ಚಾರಿತ್ರಿಕ ಹಿನ್ನಲೆ ಕೊಟ್ಟ ಶರ್ಮರು, ಅನೇಕ ಕಿರಿಯ ಸಾಹಿತಿಗಳಿಗೆ ಮಾರ್ಗದರ್ಶಕರಾಗಿದ್ದರು, ಅವರನ್ನು ಸಹ ಪತ್ರಿಕಾರಂಗದಲ್ಲಿ ಮುಂಚೂಣಿಗೆ ಬರುವಂತೆ ಅತ್ಯುತ್ತಮ ಮಾರ್ಗದರ್ಶನ ನೀಡಿರುತ್ತಾರೆ.

ಅತ್ಯಂತ ಸರಳಜೀವಿಯೂ, ಗಾಂಧಿವಾದಿಯೂ, ದಿಟ್ಟ ಲೇಖಕರೂ ಆಗಿದ್ದ ಕೃಷ್ಣಶರ್ಮರು, ಅತ್ಯಂತ ಸ್ವಾಭಿಮಾನಿಯಾಗಿದ್ದು, ಯಾರ ಕೃಪೆಗೂ ಕೈ ಒಡ್ಡದ ಸ್ವಾಭಿಮಾನಿಯಾಗಿದ್ದರು. ಹೈದರಾಬಾದಿನಲ್ಲಿ ಕೆಲವು ವರ್ಷಗಳು ನೆಲೆಸಿದ್ದ ಶರ್ಮರು ಅಲ್ಲಿಯ ಸಂಗ್ರಾಮಕ್ಕೆ ಜನಗಳನ್ನು ಅಣಿಗೊಳಿಸಿದರು. ಈ ಸ್ವಾತಂತ್ರ್ಯ ಪಯಣದಲ್ಲಿ ಶರ್ಮರಿಗೆ ಗಾಂಧೀಜಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಪಂಡಿತ್ ನೆಹರೂ, ಪಟ್ಟಾಭಿ ಸೀತಾರಾಮಯ್ಯ, ವಿನೋಬಾ, ರಾಜೇಂದ್ರ ಪ್ರಸಾದ್ ಮುಂತಾದ ರಾಷ್ಟ್ರ ನಾಯಕರ, ಧೀಮಂತರ ಸಖ್ಯ ದೊರೆಯಿತು.

೧೯೪೧ರಲ್ಲಿ ಮಲ್ಲೇಶ್ವರದಲ್ಲಿ ನೆಲೆ ನಿಂತ ಶರ್ಮರು 'ವಿಶ್ವಕರ್ನಾಟಕ' ಪತ್ರಿಕೆಗೆ ತಿ ತಾ ಶರ್ಮ ಎಂದೇ ಸುಪ್ರಸಿದ್ಧರಾದ ತಿರುಮಲೆ ತಾತಾಚಾರ್ಯ ಶರ್ಮರ ಜೊತೆ ಕೈಜೋಡಿಸಿ, ಪತ್ರಿಕೆಗೆ ಮೌಲ್ಯ ತಂದುಕೊಟ್ಟ ಪ್ರಮುಖರು. ಈ ಪತ್ರಿಕೆಯಲ್ಲಿ ಅವರ ಅಂಕಣ ಲೇಖನ 'ಮಾತಿನ ಮಂಟಪ' ಅತ್ಯಂತ ಜನಪ್ರಿಯವಾಗಿದ್ದು, ರಾಷ್ಟ್ರಮಟ್ಟದಲ್ಲಿ ಈ ಪತ್ರಿಕೆ ವಿಶಿಷ್ಟ ಸ್ಥಾನ ಪಡೆಯಿತು.

'ಗಾಂಧಿ ಸಾಹಿತ್ಯ ಸಂಘ'ದ ಸ್ಥಾಪಕರೂ ಮತ್ತು ಅದರ ಆಧಾರ ಸ್ತಂಭವೂ ಶರ್ಮರು. ಆಗಿನ ಕಾಲದ ಜೀವನ, ಸ್ವಾತಂತ್ರ್ಯ ಚಳವಳಿ, ಹೋರಾಟಗಳನ್ನು ಮುಂದಿನ ಪೀಳಿಗೆಗಾಗಿ ಅಚ್ಚುಕಟ್ಟಾಗಿ ಲೇಖನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ.

## ಹೊ. ಶ್ರೀನಿವಾಸಯ್ಯ

ಗಾಂಧಿಯುಗದ ಹಿರಿಯರು ಮಾರ್ಗದರ್ಶಕರೂ, ಹಿರಿಯ ವಿದ್ವಾಂಸರೂ, ಅಪ್ಪಟ ಗಾಂಧಿವಾದಿಗಳೂ, ಪ್ರಕೃತಿ ಚಿಕಿತ್ಸಾತಜ್ಞರೂ ಆಗಿದ್ದ ಗಾಂಧಿಮಾರ್ಗಿ ಶ್ರೀನಿವಾಸಯ್ಯನವರು ಕಳೆದ ದಶಕಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದು ನೂರಾರು ಯುವಕರಿಗೆ ಮಾರ್ಗದರ್ಶಕರಾಗಿದ್ದರು. ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಮಲ್ಲೇಶ್ವರದ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು, ಹಲವು ದಶಕಗಳಿಂದಲೂ ಸಕ್ರಿಯವಾಗಿದ್ದು, ಈಗ ೩-೪ ವರ್ಷದ ಹಿಂದೆ ಕಾಲವಾದರು. ಅವರನ್ನು ಹಲವು ಕಾರ್ಯಕ್ರಮಗಳಲ್ಲಿ ಭೇಟಿಯಾಗಿದ್ದ ಹಾಗೂ ಒಂದು ಲೇಖನದ ಮಾಹಿತಿಗೆ ಸಂಬಂಧಪಟ್ಟಂತೆ ಅವರ ಮನೆಗೆ ಹೋಗಿದ್ದ ಸೌಭಾಗ್ಯವೂ ನನ್ನದಾಗಿತ್ತು.

೦೪-೦೧-೧೯೨೫ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಹೊ ಶ್ರೀನಿವಾಸಯ್ಯ ಅವರು, ಮಲ್ಲೇಶ್ವರದಲ್ಲಿ ಹುಟ್ಟಿ ಬೆಳೆದು ತಮ್ಮ ಕಾರ್ಯಕ್ಷೇತ್ರವಾಗಿ ಈ ಬಡಾವಣೆಯಲ್ಲಿಯೇ ತೊಡಗಿಸಿಕೊಂಡರು. ಸತ್ಯಾಗ್ರಹದ ಅನುಭವ, ಗಾಂಧಿತತ್ವದ ಹಿರಿಯ ಪರಂಪರೆಯ ಶ್ರೀನಿವಾಸಯ್ಯನವರು ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮ ಹೆಜ್ಜೆಯ ಗುರುತು ಮೂಡಿಸಿದ್ದಾರೆ.

ಯುವಕ ಶ್ರೀನಿವಾಸಯ್ಯ ಅವರು ಕ್ವಿಟ್ ಇಂಡಿಯಾ ಚಳವಳಿಯಿಂದ ಪ್ರಭಾವಿತರಾಗಿ ಮಲ್ಲೇಶ್ವರದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಮಲ್ಲೇಶ್ವರ ವೃತ್ತದ ಹತ್ತಿರ ಪೊಲೀಸ್ ಠಾಣೆ ಇದ್ದು, ಅದರ ಪಕ್ಕದಲ್ಲಿದ್ದ ಟೈಪ್‌ರೈಟರ್ ಸಂಸ್ಥೆಯಲ್ಲಿ ಕರಪತ್ರಗಳನ್ನು ಮುದ್ರಿಸುತ್ತಿದ್ದು, ಇವರ ಗೆಳೆಯರಾದ ಗೋಪಾಲಕೃಷ್ಣರಾವ್, ಲಕ್ಷ್ಮಿನಾರಾಯಣ ಅವರ ಜತೆ ಪತ್ರಿಕೆಯ ಪ್ರಸಾರವನ್ನು ಮಾಡುತ್ತಿದ್ದರು. ಸಮೀಪದಲ್ಲಿ ವೆಂಕಟಪ್ಪ ಅನ್ನುವವರ ಪುಸ್ತಕ ಅಂಗಡಿ ಇತ್ತು. ಅಲ್ಲೂ ಕೂಡ ಸಂಗ್ರಾಮದ ಪತ್ರಿಕೆಗಳನ್ನು ಮೂರು ಕಾಸು, ಒಂದಾಣೆಗೆ ಮಾಡುತ್ತಿದ್ದರು. ಪೊಲೀಸರ ಹದ್ದಿನ ಕಣ್ಣಿಗೆ ವೆಂಕಟಪ್ಪ ಅವರ ಕೆಲಸಗಳು ಬಿತ್ತು. ೫-೬ ತಿಂಗಳು ಅವರಿಗೆ ಜೈಲು ಶಿಕ್ಷೆಯೂ ಆಯಿತು. ಮಲ್ಲೇಶ್ವರದಲ್ಲಿ ಗಾಂಧಿ ಸಾಹಿತ್ಯ ಸಂಘ ಪ್ರಾರಂಭ ಮಾಡಿದ ಮೇಲೆ, ಶ್ರೀರಾಮಪುರದಲ್ಲಿ ತಿಲಕ್ ಸಂಘ ಪ್ರಾರಂಭಿಸಿದರು. ಮಹಾರಾಜ ಮಿಲ್‌ನಲ್ಲಿ ಕಾರ್ಮಿಕರಾಗಿದ್ದ



ಅಯೋಧ್ಯಾ ರಾಮ್, ಬಿ ಆರ್ ನಾಯ್ಡು, ಮುಂತಾದವರು ಈ ಸಂಘದ ಸದಸ್ಯರಾಗಿದ್ದರು. ಮಲ್ಲೇಶ್ವರದ ಮುನಿಸಿಪಾಲಿಟಿ ಆಸ್ಪತ್ರೆಯಲ್ಲಿ ಕಾಂಪೌಂಡರ್ ಆಗಿ ಸೇವೆ ಸಲ್ಲಿಸುತ್ತಿದ್ದ ದಲಿತರಾದ ಮುದ್ದಣ, ಹರಿಜನ ಮಕ್ಕಳಿಗಾಗಿ ಕಸ್ತೂರ್ಬಾ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿದ್ದರು.

ಸುಭಾಷ್ ನಗರದ ಕೆರೆ ಕಾಂಗ್ರೆಸ್ ವಸ್ತುಪ್ರದರ್ಶನವಾಗಿ ರೂಪುಗೊಂಡಿತು. (ಈಗಿನ ಬಿಟಿಎಸ್ ನಿಲ್ದಾಣ) ಮಲ್ಲೇಶ್ವರದ ಇನ್ನೋರ್ವ ಸ್ವಾತಂತ್ರ್ಯ ಸೇನಾನಿ ಪಿ ರಾಮ್‌ದೇವ್ ಅವರು ಶ್ರೀನಿವಾಸಯ್ಯ ಮತ್ತು ಇತರ ಸ್ನೇಹಿತರ ಬೆಂಬಲದಿಂದ ಮುನಿಸಿಪಾಲಿಟಿಯಲ್ಲಿ ಗೆದ್ದು ಆ ಮೂಲಕ ನಾಗರಿಕರ ಸೇವೆಗೆ ಅವಕಾಶ ಒದಗಿಬಂತು.

ಶ್ರೀನಿವಾಸಯ್ಯ ಅವರಿಗೆ ಸಿದ್ಧವನಹಳ್ಳಿ ಕೃಷ್ಣಶರ್ಮರ ಮಾರ್ಗದರ್ಶನವೂ ಇದ್ದು, ದಶಕಗಳ ಕಾಲ ಗಾಂಧಿ ಸಾಹಿತ್ಯ ಸಂಘದಲ್ಲಿ ಮತ್ತು ಶ್ರೀ ರಾಮಮಂದಿರದಲ್ಲಿ ಸಕ್ರಿಯವಾಗಿದ್ದರು. ಸಾಹಿತ್ಯಕ್ಷೇತ್ರದಲ್ಲಿಯೂ ಇವರ ಕೊಡುಗೆ ಅಪಾರ. ಸ್ವಾತಂತ್ರ್ಯ ಚಳವಳಿ ಮತ್ತು ಗಾಂಧೀಜಿ ಅವರ ವ್ಯಕ್ತಿತ್ವದ ಬಗ್ಗೆ, ಪ್ರಕೃತಿ ಚಿಕಿತ್ಸೆ ಬಗ್ಗೆ ಪುಸ್ತಕಗಳನ್ನು ಬರೆದಿದ್ದಾರೆ. ಪ್ರೊ ಮಲ್ಲೇಪುರಂ ಜಿ ವೆಂಕಟೇಶ್ ಅವರ ಸಂಪಾದಕತ್ವದಲ್ಲಿ ಡಾ॥ ಹೊ ಶ್ರೀನಿವಾಸಯ್ಯ ಸಮಗ್ರ ಸಾಹಿತ್ಯ ಮೂರು ಸಂಪುಟಗಳಲ್ಲಿ ಲೋಕಾರ್ಪಣೆಯಾಗಿದ್ದು, ಶ್ರೀನಿವಾಸಯ್ಯ ಅವರ ಜೀವನ, ಸಾಮಾಜಿಕ ಸೇವೆ, ಚಳವಳಿಯಲ್ಲಿ ಅವರ ಪಾತ್ರದ ವಿವರಗಳು ದೊರೆಯುತ್ತವೆ.

## ಕ್ರಾಂತಿಕಾರಿ ಸುಬ್ರಹ್ಮಣ್ಯಂ

ಮೈಸೂರು ಸಂಸ್ಥಾನದ ಪ್ರಗತಿಗೆ ಜೀವನವನ್ನು ಮುಡಿಪಾಗಿಟ್ಟ, ರಾಜನಿಷ್ಠೆಯನ್ನು ಸ್ವಾಮಿನಿಷ್ಠೆಗಾಗಿ ಭಾವಿಸಿದ್ದ ಎಚ್ ವಿ ನಂಜುಂಡಯ್ಯ ಅವರು ಅನೇಕ ಜನೋಪಯೋಗಿ ಕಾರ್ಯಗಳನ್ನು ಮಾಡಿರುತ್ತಾರೆ. ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ತಮ್ಮ ಛಾಪು ಮೂಡಿಸಿದ್ದರು. ಕನ್ನಡ ಸಾಹಿತ್ಯ ಸಮ್ಮೇಳನದ ಮೊದಲ, ಎರಡನೇ ಹಾಗೂ ಮೂರನೇ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಚಳವಳಿ, ಆಂದೋಲನ ಮಾಡುವುದು ರಾಜದ್ರೋಹವೆಂದು ನಂಜುಂಡಯ್ಯ ಅವರು ಭಾವಿಸಿದ್ದರು. ಆದರೆ, ಅವರ ಎರಡನೇ ಮಗ

ತಂದೆಯ ಧೋರಣೆಗಳಿಗೆ ವಿರುದ್ಧವಾಗಿದ್ದು, ಓದಿನಲ್ಲಿ ಹೆಚ್ಚು ಆಸಕ್ತಿ ತೋರದೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಾಂತಿಕಾರಿಯಾಗಿ ಭಾಗವಹಿಸುತ್ತಾರೆ. ತಂದೆಯವರ ಎಚ್ಚರಿಕೆಯನ್ನು ಅಲಕ್ಷಿಸಿ, ಕಾಂಗ್ರೆಸ್ ಪಕ್ಷವನ್ನು ಸೇರಿ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ತಂದೆಯವರ ಮರಣ ಹೊಂದಿದ ಮೇಲೆ ಸುಬ್ರಹ್ಮಣ್ಯಂ ಹಲವು ಬಾರಿ ಸೆರೆವಾಸವನ್ನೂ ಅನುಭವಿಸಿದ್ದರು.

೧೯೨೮–೨೯ರಲ್ಲಿ, ಆಗಿನ ದಿನಗಳಲ್ಲಿ ಮತೀಯ ಘರ್ಷಣೆಗೆ ಕಾರಣವಾದ ಸುಲ್ತಾನ್ ಪೇಟೆಯ ಗಣಪತಿ ಗಲಾಟೆ ಮುಂತಾದ ಮುಂದಾಳತ್ವವನ್ನು ವಹಿಸಿದ್ದರು. ಶಾಲೆಯ ಆವರಣದಲ್ಲಿ ಸ್ಥಾಪಿಸಲಾಗಿದ್ದ ಗಣಪತಿಯನ್ನು ಸ್ಥಳಾಂತರಿಸಿದ ಕಾರಣಕ್ಕೆ, ಅದು ಹಿಂದೂ ಮುಸ್ಲಿಂ ಸಂಘರ್ಷಕ್ಕೆ ಕಾರಣವಾಯಿತು. ಆ ಸಂದರ್ಭದಲ್ಲಿ, ಗಲಭೆಗಳನ್ನು ಶಮನ ಮಾಡಲು ಪೊಲೀಸರು ಗೋಲಿಬಾರ್ ಕೂಡ ಮಾಡಿದ್ದರು. ಇವರೆಲ್ಲರ ಧೀರ ಹೋರಾಟದಿಂದ ಸರಕಾರ ಸೋಲನ್ನೊಪ್ಪಿ ಗಣಪತಿಯನ್ನು ಯಥಾಸ್ಥಾನದಲ್ಲಿ ಸ್ಥಾಪಿಸಿತು. ಈ ದಿಟ್ಟತನದ ಕಾರ್ಯಕ್ಕಾಗಿ, ಸಾರ್ವಜನಿಕರು ಸುಬ್ರಹ್ಮಣ್ಯಂ ಅವರಿಗೆ ಚಿನ್ನದ ಪದಕವನ್ನು ತೊಡಿಸಿ ಸನ್ಮಾನಿಸಿದರು.

ಮಗನಿಗೆ ಸ್ವಾತಂತ್ರ್ಯ ಚಳವಳಿಯ ತೀವ್ರವಾದ ಆಸಕ್ತಿ ತೊಡಗಿಸಿಕೊಳ್ಳುವಿಕೆ, ಆದರೆ ತಂದೆಗೆ ಅತೀವ ರಾಜನಿಷ್ಠೆ. ರಾಜಭಕ್ತಿಯ ದ್ಯೋತಕವಾಗಿ ೧೯೧೩ರಲ್ಲಿ ಇವರನ್ನು ಗೌರವಿಸಿ 'ರಾಜಮಂತ್ರ ಪ್ರವೀಣ' ಎಂಬ ಬಿರುದನ್ನುಕೊಟ್ಟಿರುತ್ತಾರೆ. ಬ್ರಿಟಿಷ್ ಸರ್ಕಾರ ಇವರ ಸೇವೆಯನ್ನು ಪರಿಗಣಿಸಿ 'ಸಿ.ಐ.ಇ' (ಕಂಪ್ಯಾನಿಯನ್ ಆಫ್ ದಿ ಇಂಡಿಯನ್ ಎಂಪೈರ್) ಎಂಬ ಬಿರುದನ್ನು ಕೊಟ್ಟಿತು. ತಂದೆಯದು ಪ್ರಶ್ನಿಸಲಾಗದ ರಾಜನಿಷ್ಠೆಯಾದರೆ, ಮಗನದು ದೇಶಕ್ಕಾಗಿ ಬಲಿದಾನ ಮಾಡಲು ಸಿದ್ಧವಿದ್ದ ದೇಶನಿಷ್ಠೆ. ವಿಪರ್ಯಾಸದ ಎರಡು ದ್ವಂದ್ವ ಸಿದ್ಧಾಂತಗಳು ಒಂದೇ ಮನೆಯಲ್ಲಿ ವಾಸಿಸುತ್ತಿದ್ದ ಅಪ್ಪ–ಮಗನಲ್ಲಿ. ಇದನ್ನೇ ಇಂಗ್ಲಿಷ್‌ನಲ್ಲಿ ಜನರೇಷನ್ ಗ್ಯಾಪ್ ಎನ್ನುತ್ತಾರೆ.

**ಸರ್ವೋದಯಕಾರ್ಯಕರ್ತೆಗಾಂಧಿ ಪ್ರಭಾವದ ಸತ್ಯಾಗ್ರಹಿ ಬಿ ಕಾಮಾಕ್ಷಮ್ಮ**

ಮಲ್ಲೇಶ್ವರದ ನಿವಾಸಿಯಾಗಿದ್ದ ಬಿ ಕಾಮಾಕ್ಷಮ್ಮ ಅವರು, ಸಾಂಪ್ರದಾಯಿಕ ಕುಟುಂಬದ ಹೆಣ್ಣುಮಗಳು. ಬಾಲ್ಯ ವಿವಾಹವಾದ ಕಾಮಾಕ್ಷಮ್ಮನವರು, ಅವರ ಹನ್ನೆರಡನೇ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ವೈಧವ್ಯ ಪಟ್ಟವನ್ನು ಪಡೆಯುತ್ತಾರೆ. ಸಾಂಪ್ರದಾಯಿಕ ಕುಟುಂಬದ ಅಡೆ–ತಡೆಗಳನ್ನು ಮೀರಿ, ಮನೆಯವರ ಕಣ್ತಪ್ಪಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುತ್ತಾರೆ. ಗಾಂಧಿ ಮಾರ್ಗದ ಪ್ರಭಾವದಲ್ಲಿ ಸಾಮೂಹಿಕ ಪ್ರಾರ್ಥನೆ, ಸಾರ್ವಜನಿಕ ಸ್ವಚ್ಛತೆ ಮತ್ತು ಸಹಬಾಳ್ವೆಯಿಂದ ಮನಸ್ಸು ನಿರ್ಮಲವಾಯಿತು ಎಂದು ತಮ್ಮ ಒಂದು ಲೇಖನದಲ್ಲಿ ತಿಳಿಸಿದ್ದಾರೆ.



ಮಹಾತ್ಮ ಗಾಂಧೀಜಿಯವರು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘದ' ಮೈದಾನದಲ್ಲಿ ಹಿಂದಿಯಲ್ಲಿ ಭಾಷಣವನ್ನು ಮಾಡಿದಾಗ, ಹಿಂದಿ ಭಾಷೆ ಬರದ ಕಾಮಾಕ್ಷಮ್ಮನವರು ಹಿಂದಿಯನ್ನು ಕಲಿಯಲು ಪ್ರಾರಂಭಿಸಿದರು. ೧೯೪೨ರ ಸ್ವಾತಂತ್ರ್ಯ ಚಳವಳಿಯಲ್ಲಿ ಹಿಂದಿ ಪ್ರಚಾರದ ನೆಪದಲ್ಲಿ ಚಳವಳಿಗಳಲ್ಲಿ ಭಾಗವಹಿಸಿದ್ದರು. ಕರಪತ್ರಗಳನ್ನು ಹಂಚುವುದು, ಭೂಗತ ಪತ್ರಿಕೆಗಳನ್ನು ಹಂಚುವುದು, ಧ್ವಜವನ್ನು ಹಾರಿಸುವ ಕೆಲಸವನ್ನು ಮನೆಯವರ ಭಯದಿಂದ ಗುಪ್ತವಾಗಿ ಮಾಡುತ್ತಿದ್ದರು.

ಮಲ್ಲೇಶ್ವರದ ೯ನೇ ಅಡ್ಡರಸ್ತೆಯಲ್ಲಿ ಒಂದು ಚಿಕ್ಕದಾದ ಮನೆಯಲ್ಲಿ ವಾಸವಿದ್ದ ಅವರ ಮನೆಯಲ್ಲಿದ್ದ ಆಸ್ತಿಯೆಂದರೆ ಸಂಗ್ರಹದ ಪುಸ್ತಕ ಭಂಡಾರ, ಅರ್ಥಗರ್ಭಿತ ಲೇಖನಗಳು, ಖಾದಿ ಸೀರೆಗಳು. ೧೯೪೩ರಲ್ಲಿ ಮುಂಬಯಿ ಬಳಿಯ ಬೋರಿವಿಲಿಯಲ್ಲಿ ನಡೆದ ಶಿಕ್ಷಣ ಶಿಬಿರದಲ್ಲಿ ಭಾಗವಹಿಸಿದ್ದರು. ಗಾಂಧೀಜಿಯವರ ನಡೆನುಡಿಗಳ ಅತೀವ ಪ್ರಭಾವ ಹೊಂದಿದ್ದ ಕಾಮಾಕ್ಷಮ್ಮನವರು, 'ಗಾಂಧೀಜಿ ನನಗೇನು ಮಾಡಿದರು' ಎಂಬ ಶೀರ್ಷಿಕೆಯಲ್ಲಿ ತಾವು ಕಂಡ ಶಿಬಿರದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಸಿದ್ಧವನಹಳ್ಳಿ ಕೃಷ್ಣಶರ್ಮರು ಚಳವಳಿಯ ಮುಖಂಡತ್ವ ವಹಿಸಿಕೊಂಡಾಗ, ಚಳವಳಿಯನ್ನು ಚುರುಕುಗೊಳಿಸಿದರು. ಸಾತ್ವಿಕ ಮನೋಭಾವದ ಶರ್ಮಾಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಅವರದು ಸಿಂಹಗರ್ಜನೆ ಆಗಿತ್ತು ಎಂದು ತಮ್ಮ ಅನುಭವವನ್ನು ಅವರ ಲೇಖನದಲ್ಲಿ ದಾಖಲಿಸಿದ್ದಾರೆ.

೧೯೪೨–೪೭ರ ಚಳವಳಿಯಲ್ಲಿ ವಿದ್ಯಾರ್ಥಿಗಳು ೧೪೪ ಸೆಕ್ಷನ್

ಜಾರಿಯಲ್ಲಿದ್ದರೂ ಅದನ್ನು ಉಲ್ಲಂಘಿಸಿ ಮೆರವಣಿಗೆ ಮಾಡುವುದು, ಭೂಗತ ಪತ್ರಿಕೆ ಹಂಚುವುದು ಮಾಡುತ್ತಿದ್ದರು. ಈ ಮಹಾನ್ ಸಂಗ್ರಾಮದಲ್ಲಿ ಅನೇಕ ಕಾರ್ಮಿಕರುಕೂಡ ಭಾಗವಹಿಸಿದ್ದರು. ೧೯೪೨ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಚಳವಳಿ ತೀವ್ರ ಸ್ವರೂಪ ಪಡೆದು ಮಲ್ಲೇಶ್ವರದ ಗಾಂಧಿ ಸಾಹಿತ್ಯ ಸಂಘ, ಕುಮಾರಪಾರ್ಕ್‌ನ ಗಾಂಧಿಭವನ ಅನೇಕ ಸತ್ಯಾಗ್ರಹ ಸತ್ಯಾಗ್ರಹಿಗಳಿಗೆ ಕಾರ್ಯಸ್ಥಾನವಾಗಿತ್ತು. ಅನೇಕ ರಾಷ್ಟ್ರ ನಾಯಕರು ಈ ಸ್ಥಳಗಳಿಗೆ ಭೇಟಿಕೊಟ್ಟು ಅಹಿಂಸಾ ಯುದ್ಧದ ಬಗ್ಗೆ ಪ್ರಜೆಗಳಿಗೆ ಮನದಟ್ಟು ಮಾಡಿ ಹುರಿದುಂಬಿಸುತ್ತಿದ್ದರು. ಕುಮಾರಪಾರ್ಕ್‌ನ ಗಾಂಧಿಭವನದ ಕೆ. ಶ್ರೀನಿವಾಸರಾವ್ ಈ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅನೇಕ ಸ್ವಾತಂತ್ರ್ಯ ಹೋರಾಟಗಾರರು ಪ್ರಚಾರದಿಂದ ದೂರವಾಗಿ ಅನಾಮಧೇಯರಾಗಿಯೇ ಉಳಿದು ದೇಶಸೇವೆಯಲ್ಲಿ ತೊಡಗಿಕೊಂಡು ತಮ್ಮ ಜೀವನವನ್ನು ಧನ್ಯರಾಗಿಸಿಕೊಂಡರು.

❑

## ಬೆಂಗಳೂರಿನಲ್ಲಿ ಮಹಾತ್ಮ ಗಾಂಧೀಜಿ

ಬೆಂಗಳೂರಿಗೆ ಮೊದಲ ಬಾರಿಗೆ ಆಗಮಿಸಿದು – ೧೯೧೫

ಖಿಲಾಫತ್ ಚಳುವಳಿಯ ಅಂಗವಾಗಿ ಸಂಬಂಧವಾಗಿ – ೧೯೨೦

ಖಾದಿ ಪ್ರಚಾರಕ್ಕಾಗಿ ಪ್ರವಾಸ – ೧೯೨೭

ಹರಿಜನರ ಉದ್ಧಾರಕ್ಕಾಗಿ ಮೊದಲನೇ ಪ್ರವಾಸ – ೧೯೩೪

ಹರಿಜನರ ಉದ್ಧಾರಕ್ಕಾಗಿ ಎರಡನೇ ಪ್ರವಾಸ – ೧೯೩೬

೧೯೩೪ರಲ್ಲಿ ಮಹಾತ್ಮ ಗಾಂಧಿಯವರು ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಗಳನ್ನು ರೂಪಿಸಿ, ಅಸ್ಪೃಶ್ಯರನ್ನು 'ಹರಿಜನ' ಎಂದು ನಾಮಕರಣ ಮಾಡಿದರು. ಜನಸಾಮಾನ್ಯರಲ್ಲೂ ಈ ಜಾತಿ ಭೇದವನ್ನು ಕೊನೆಗಾಣಿಸಿ, ಭಾರತೀಯರೆಲ್ಲರೂ ನಾವೆಲ್ಲ ಒಂದೇ ಎನ್ನುವ ತತ್ವದಡಿ ಎಲ್ಲರಿಗೂ ಸಮಾನ ಗೌರವ ಕೊಡುವ ಮನೋದೃಷ್ಟಿಯಿಂದ, ಅಸ್ಪೃಶ್ಯತೆ ನಿವಾರಣೆಗಾಗಿ ಭಾರತದ ಎಲ್ಲ ಕಡೆ ಪ್ರವಾಸ ಮಾಡಿದರು. ಹರಿಜನ ಕೇರಿಗಳಿಗೆ ಭೇಟಿ ಕೊಡುತ್ತಿದ್ದರು. ವಿದ್ಯಾಭ್ಯಾಸದ ಮಹತ್ವದ ಬಗ್ಗೆ ತಿಳಿವಳಿಕೆ ಕೊಡುತ್ತಿದ್ದರು.

ಹರಿಜನೋದ್ಧಾರಕ್ಕಾಗಿ ಮೈಸೂರು ರಾಜ್ಯದಲ್ಲಿ ೨ ಬಾರಿ ಪ್ರವಾಸ ಮಾಡಿದರು. ಮಹಾರಾಜರು ಎಂದಿನಂತೆ ಗಾಂಧೀಜಿಯವರಿಗೆ ಕುಮಾರಕೃಪಾ ಅತಿಥಿಗೃಹದಲ್ಲಿ ವಸತಿಯನ್ನು ಕಲ್ಪಿಸಿಕೊಟ್ಟಿದ್ದರು. ಸುತ್ತಮುತ್ತಲಿನ ಸಾವಿರಾರು ರಾಷ್ಟ್ರಪ್ರೇಮಿಗಳು ಗಾಂಧೀಜಿಯವರ ದರ್ಶನಕ್ಕೆ, ಅವರ ಭಾಷಣಗಳಿಗೆ ಕಾತುರರಾಗಿ ಕಾಯುತ್ತಿದ್ದರು. ದೇಶಸೇವೆಗೆ ಸಂಗ್ರಹಿಸಿದ ಹಣವನ್ನು

ಗಾಂಧೀಜಿಯವರಿಗೆ ಅರ್ಪಿಸಲು ಕಾದು ಕೊಂಡಿರುತ್ತಿದ್ದರು. ಹರಿಜನ ಕಲ್ಯಾಣಕ್ಕಾಗಿ ರಾಜ್ಯದ ಅನೇಕ ಕಡೆ ಪ್ರವಾಸ ಮಾಡಿದರು. ಅವರು ಹಿಂದೂಪುರ, ವಿದುರಾಶ್ವತ್ಥ, ಗೌರಿಬಿದನೂರು, ದೊಡ್ಡಬಳ್ಳಾಪುರ, ತುಮಕೂರು, ತ್ಯಾಮಗೊಂಡ್ಲು, ನೆಲಮಂಗಲದ ಮೂಲಕ ಸಂಜೆಯ ಸಮಯದಲ್ಲಿ ಯಶವಂತಪುರಕ್ಕೆ ಆಗಮಿಸಿದರು. ಅಲ್ಲಿಂದ ಗಾಂಧೀಜಿಯವರು ಮಲ್ಲೇಶ್ವರಕ್ಕೆ ಬಂದು ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಹಾಗೂ ಮಲ್ಲೇಶ್ವರದ ಅಸೋಸಿಯೇಷನ್‌ಗೆ ಭೇಟಿಕೊಟ್ಟರು.

೦೭–೦೧–೧೯೩೪ರ ಭಾನುವಾರ ಮಲ್ಲೇಶ್ವರಕ್ಕೆ ಹೋಗುವ ರಸ್ತೆಯಲ್ಲಿ (ಈಗಿನ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಪಕ್ಕ) ೧೯೩೦ರಲ್ಲಿ ಪ್ರಾರಂಭಿಸಿದ್ದ 'ದೀನ ಸೇವಾ ಸಂಘ'ಕ್ಕೆ ಆಗಮಿಸಿದರು. ಅಲ್ಲಿ ಗಾಂಧೀಜಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ನಂತರ ಅಲ್ಲಿಯೇ ವಿದ್ಯಾರ್ಥಿ ಮಂದಿರದ ಶಂಕುಸ್ಥಾಪನೆಯನ್ನು ಮತ್ತು 'ಮುದ್ದುರಾಮ ಶೆಟ್ಟಿ ಸ್ಮಾರಕ ಆಸ್ಪತ್ರೆ' ಕಟ್ಟಡದ ಶಂಕುಸ್ಥಾಪನೆಯನ್ನು ಗಾಂಧೀಜಿಯವರು ನೆರವೇರಿಸಿದರು.

**(ಬೆಂಗಳೂರಿನಲ್ಲಿ ಮಹಾತ್ಮಗಾಂಧಿ– ಪುಟ: ೧೩೯)**

ಸ್ವಾತಂತ್ರ್ಯ ಸಂಗ್ರಾಮದ ಆ ಮಹಾ ಕಾಲಘಟ್ಟದಲ್ಲಿ ಜನಸಾಮಾನ್ಯರು ಗಾಂಧೀಜಿಯವರನ್ನು ಕಾಣಲು ತವಕಿಸುತ್ತಿದ್ದರು. ಭಕ್ತಿಯಿಂದ ಮಹಾತ್ಮರಿಗೆ ಕಾಣಿಕೆಗಳನ್ನು ಕೊಡಲು ಕಾಯುತ್ತಿದ್ದರು. ಎಲ್ಲ ವಿಧದ ಜಾಗೃತಿಯಿಂದಾಗಿ ಗಾಂಧೀಜಿಯವರನ್ನು ಕಾಣಲು ಸುತ್ತಮುತ್ತಲಿನ ನಿವಾಸಿಗಳು ಕಾತರದಿಂದ ಕಾಯುತ್ತಿದ್ದರು.

ಶಂಕುಸ್ಥಾಪನೆಯನ್ನು ನೆರವೇರಿಸಿ, ಶ್ರೀರಾಮಪುರದ ಸೇವಾಶ್ರಮಕ್ಕೆ ಭೇಟಿ ನೀಡಿ, ಹರಿಜನ ಕಾಲೋನಿಗೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಗಮನಿಸಿದರು. ಅವರು ತಮ್ಮ ಭಾಷಣದಲ್ಲಿ ಮೈಸೂರು ರಾಜ್ಯ ಪ್ರಗತಿಪರ ರಾಜ್ಯ ಎಂದು ಹೆಸರಾಗಿದೆ. ಮೈಸೂರಿನ ಜನ ಈ ಹೆಸರನ್ನು ಉಳಿಸಿಕೊಳ್ಳಲು ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತು ಹಾಕುತ್ತಾರೆ ಎಂದು ನಂಬಿದ್ದೇನೆ ಎಂಬ ಸಂದೇಶವನ್ನು ನೀಡಿದರು.



ಗಾಂಧೀಜಿ ಭಾಗವಹಿಸಿದ ಕಾರ್ಯಕ್ರಮಗಳಲ್ಲಿ ಹರಿಜನ ಉದ್ಧಾರದ ಕಾರ್ಯಕ್ರಮಗಳಿಗೆ, ಹಿಂದಿ ಪ್ರಚಾರಗಳಿಗಾಗಿ ದೇಣಿಗೆ ಸಂಗ್ರಹಿಸುತ್ತಿದ್ದರು. ಕೆಲವೊಂದು ಸಮಾರಂಭಗಳಲ್ಲಿ ಮಹಿಳೆಯರು ತಮ್ಮ ಒಡವೆಗಳನ್ನು, ಅವರ ಸೇವಾ ಕಾರ್ಯಗಳಿಗೆ ಅನುಕೂಲವಾಗಲೆಂದು ಅರ್ಪಿಸುತ್ತಿದ್ದರು. ಮೈಸೂರು ರಾಜ್ಯ ಶಿಲ್ಪಿ ಸರ್ ಎಂ ವಿಶ್ವೇಶ್ವರಯ್ಯ ಅವರು ಅನೇಕ ಬಾರಿ ಗಾಂಧೀಜಿಯವರನ್ನು ಭೇಟಿಯಾಗಿದ್ದರು. ಡಿ ವಿ ಗುಂಡಪ್ಪನವರು ಬಸವನಗುಡಿ ಪ್ರದೇಶದಲ್ಲಿ ಸಮಾರಂಭವನ್ನು ಏರ್ಪಡಿಸಿದ್ದರು. ಗಾಂಧೀಜಿ ಅವರೊಂದಿಗೆ ನಿಕಟ ಸಂಪರ್ಕದಲ್ಲಿದ್ದ ಗುಂಡಪ್ಪನವರು, ಗಾಂಧೀಜಿಯವರ ಪ್ರವಾಸ ಸಭೆಗಳ ವ್ಯವಸ್ಥೆಯನ್ನು ಮಾಡುತ್ತಿದ್ದರು. ಡಿವಿಜಿಯವರ ಅನೇಕ ಲೇಖನಗಳಲ್ಲಿ ಗಾಂಧೀಜಿ ಮತ್ತು ಸಂಗಡಿಗರು ಅಗಮಿಸಿದ ಸಮಾರಂಭಗಳ ಭಾಷಣ ವಿವರಗಳು ಇವೆ.

ಮಲ್ಲೇಶ್ವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಹತ್ವ ಕೊಟ್ಟಂತೆಯೇ, ಸ್ವಾತಂತ್ರ್ಯ ಸಂಗ್ರಾಮಕ್ಕೂ ಕಾಣಿಕೆ ಸಲ್ಲಿಸಿದೆ. ಸ್ವಾತಂತ್ರ್ಯ ಸಂಗ್ರಾಮದ ಕುರುಹಾಗಿ 'ಗಾಂಧಿ ಸಾಹಿತ್ಯ ಸಂಘ' ನಮ್ಮ ಕಣ್ಣ ಮುಂದೆ ಇಂದಿಗೂ ಉಳಿದಿದೆ. ಕಳೆದ ಶತಮಾನದಲ್ಲಿಈಗಿನಷ್ಟು ಬೃಹದಾಕಾರವಾಗಿ ಬೆಳೆಯದ ಬೆಂಗಳೂರಿನ ಉತ್ತರಭಾಗಗಳಾದ ಶೇಷಾದ್ರಿಪುರ, ಕುಮಾರಪಾರ್ಕ್, ಶ್ರೀರಾಂಪುರ, ಯಶವಂತಪುರ ವ್ಯಾಪ್ತಿಯಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದೆ. ಇಲ್ಲಿನ ವಿದ್ಯಾರ್ಥಿಗಳು, ಕಾರ್ಮಿಕರು, ಹಿರಿಯ ನಾಗರಿಕರು ಗಾಂಧೀಜಿಯವರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ ದಾಖಲೆಗಳು ಇವೆ.

ಸ್ವಾತಂತ್ರ್ಯ ಸಂಗ್ರಾಮದ ರೂವಾರಿ, ಅಹಿಂಸಾ ಚಳವಳಿಯನ್ನು ಪ್ರಾರಂಭಿಸಿದ ದಕ್ಷಿಣ ಆಫ್ರಿಕಾದ ಮಾರ್ಟಿನ್‌ಕಿಂಗ್‌ರ ಜೊತೆಜೊತೆಗೆ ರಾಷ್ಟ್ರವ್ಯಾಪಿ ಗಾಂಧಿತತ್ವ–ಗಾಂಧಿಮಾರ್ಗ ಅನುಷ್ಠಾನವಾಗಿದೆ.

ಗಾಂಧೀಜಿಯವರ ವಿಸ್ತಾರವಾದ ಬರವಣಿಗೆಯಲ್ಲಿ ಅವರು ಭಾಗವಹಿಸಿದ ಚಳವಳಿಗಳು, ಜನಗಳ ಸಂಪರ್ಕ, ಅವರು ಸಂಪರ್ಕ ಮಾಡಿದ ಸ್ವಾತಂತ್ರ್ಯ ಯೋಧರು, ರಾಜಕೀಯ ನಾಯಕರು, ಸ್ಥಳೀಯ ಘಟನೆಗಳ ಬಗ್ಗೆ ಅವರು ಬರೆದಿರುವ ಪುಸ್ತಕದಲ್ಲಿ ಮಾಹಿತಿ ದೊರೆತಿದೆ.

ದೇಶವನ್ನು ಶತಮಾನಗಳ ಕಾಲ ಆಳಿ ನಮ್ಮ ದೇಶದ ಸಂಪತ್ತನ್ನು ಲೂಟಿ ಮಾಡಿದ ಬ್ರಿಟಿಷರಿಂದ ದೇಶವನ್ನು ಬಂಧಮುಕ್ತಗೊಳಿಸುವ, ದೇಶಾಭಿಮಾನಿಗಳಿಗೆ ಸ್ವಾತಂತ್ರ್ಯದ ಕನಸನ್ನು ನನಸಾಗಿಸುವ ಅವರ ಸ್ವದೇಶಿ ಅಭಿಮಾನದ, ಶಾಂತರೀತಿಯ, ಬ್ರಿಟಿಷರ ಗುಂಡಿಗೆ ಹೆದರದ ಖಾದಿ ತುಂಡುಧಾರಿ ತನ್ನ ಧೀಃಶಕ್ತಿಯಿಂದ, ತಾಳ್ಮೆಯಿಂದ, ರಾಷ್ಟ್ರವ್ಯಾಪಿ ಸಂಚರಿಸಿ ಮಾಡಿದ ಜಾಗೃತಿಯಿಂದ, ಪ್ರತಿಯೊಬ್ಬ ಭಾರತೀಯರ ಧಮನಿಧಮನಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಜಾಗೃತಗೊಂಡಿತು. ಇಡೀ ರಾಷ್ಟ್ರದಲ್ಲಿ ಲಕ್ಷಾಂತರ ಜನರು ಆಳುವ ಬ್ರಿಟಿಷರ ವಿರುದ್ಧ ಶಾಂತಿ ಮಂತ್ರದ ಮೂಲಕ, ಅಸಹಕಾರ ಚಳವಳಿಯ ಮೂಲಕ, ಎಲ್ಲಾ ಅಭಿಮಾನಿಗಳ ನಿರೀಕ್ಷೆಯಂತೆ ೧೫ ಆಗಸ್ಟ್ ೧೯೪೭ ರ ಮಧ್ಯರಾತ್ರಿ ಬ್ರಿಟಿಷರಿಂದ ಭಾರತ ದೇಶದ ಸ್ವಾತಂತ್ರ್ಯ ಘೋಷಣೆ ಮಾಡಿ, ಕಾಂಗ್ರೆಸ್ ಮುಖಂಡರಿಗೆ ಆಡಳಿತ ಯಂತ್ರವನ್ನು ಒಪ್ಪಿಸಿ, ಬ್ರಿಟನ್ನಿನ ಎಲ್ಲ ವಸಾಹತು ಜನ ನಮ್ಮ ದೇಶ ಬಿಟ್ಟು, ಅವರ ಇಂಗ್ಲೆಂಡ್ ದೇಶಕ್ಕೆ ಮರಳಿದರು.

ಯಾರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಹುತಾತ್ಮರಾದರೋ ಅವರ ಸಾವಿನೊಂದಿಗೆ ಅವರ ಮೌಲ್ಯಗಳು ಸತ್ತು ಹೋದವು ಎನಿಸುತ್ತದೆ.

ಇಂದಿನ ಭಾರತ ತನ್ನ ಹೆಮ್ಮೆಯ ಎಪ್ಪತ್ತೈದನೇಯ ಸ್ವಾತಂತ್ರ್ಯೋತ್ಸವವನ್ನು ಸ್ವಾತಂತ್ರ್ಯ ಅಮೃತ ಮಹೋತ್ಸವ ಎಂದು ಆಚರಿಸಿಕೊಳ್ಳುವ ಸಂಭ್ರಮದಲ್ಲಿದೆ. ಅಭಿವೃದ್ಧಿಯ ಪಥದಲ್ಲಿ ದಾಪುಗಾಲಿಡುತ್ತಿರುವ ಭಾರತವು, ವಿಶ್ವದ ಭೂಪಟದಲ್ಲಿ ಪ್ರಮುಖ ಸ್ಥಾನ ಗಳಿಸುವ ಹವಣಿಕೆಯಲ್ಲಿದೆ. ಸ್ವಾತಂತ್ರ್ಯ ಬಂದ ಮೇಲೆ ನೆಲೆನಿಂತ ಕೆಲವು ಅನಿಷ್ಟ ಪದ್ಧತಿಗಳಾದ ಜಾತಿ ಪದ್ಧತಿ, ಅವಕಾಶವಾದಿ ರಾಜಕಾರಣ, ಮತದಾರರನ್ನು ಆಮಿಷಕ್ಕೆ ಓಲೈಸುವ ರಾಜಕೀಯ ವ್ಯವಸ್ಥೆ, ಮತೀಯ ಅಸಹಿಷ್ಣುತೆಗಳು ಕಡಿಮೆಯಾಗಿ ಮನುಷ್ಯ ಮನುಷ್ಯನ ಮೇಲೆ ದ್ವೇಷ, ಜಾತಿ–ಜಾತಿಯ ಮೇಲಿನ ದ್ವೇಷ ಕರಗಿ ಮನಸ್ಸುಗಳು ನಿರ್ಮಲವಾಗಿ, ಪ್ರಬುದ್ಧವಾದ, ಬಲಶಾಲಿಯಾದ, ಆರ್ಥಿಕವಾಗಿ ಬಲಿಷ್ಠವಾದ ರಾಷ್ಟ್ರವಾಗಬೇಕು, ಅದು ನಮ್ಮ ಭಾರತದ ಹಿಂದೂ ಐಕ್ಯಮತ್ಯದ ರಾಷ್ಟ್ರವಾಗಬೇಕು.

❑

## ಆಧಾರ ಗ್ರಂಥಗಳು


೧. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ದ್ವಿತೀಯ ಸಂಪುಟ–ಡಾ॥ ಸೂರ್ಯನಾಥ ಕಾಮತ್.

೨. ಬೆಂಗಳೂರು ದರ್ಶನ (ಮೂರು ಸಂಪುಟಗಳು) –ಉದಯಭಾನು ಕಲಾಸಂಘ.

೩. ಮಲ್ಲೇಶ್ವರ ಬೆಳೆದು ಬಂದ ದಾರಿ– ರಾ ಕೃ ಶ್ರೀಧರಮೂರ್ತಿ.

೪. ಬೆಂಗಳೂರಿನ ಇತಿಹಾಸ – ಬ ನ ಸುಂದರರಾವ್.

೫. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು – ಕಮಲಾ ಸಂಪಳ್ಳಿ.

೬. ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿ – ಡಾ॥ ಎಚ್‌ಎಸ್ ದೊರೆಸ್ವಾಮಿ.

೭. ಡಾ॥ ಹೊ ಶ್ರೀನಿವಾಸಯ್ಯ ಸಮಗ್ರ ಸಾಹಿತ್ಯ ಸಂಕೀರ್ಣ ಸಂಪುಟ ಸಂಗ್ರಹ: ಪ್ರೊ. ಮಲ್ಲೇಪುರಂ ಜಿ ವೆಂಕಟೇಶ್.

೮. ಸಹಕಾರ: ಮಿಥಿಕ್ ಸೊಸೈಟಿ, ಗಾಂಧಿಭವನ, ಗಾಂಧಿ ಸಾಹಿತ್ಯ ಸಂಘ.

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |